₹ 5/-

# ನೇಸರು

## ತಿಂಗಳೋಲೆ

PAGES 20

AUGUST 2025 | Nesaru Tingalole | Vol. XLIII - 08



## ಭಾರತದ ಬಲಾ ಬಲ

ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಕರ್ನಾಟಕ ಸಂಗೀತದ ಹಾಡುಗಾರಿಕೆ




ಮೈಸೂರು ಅಸೋಸಿಯೇಷನ್ ನೂರರ ಸಂಭ್ರಮದಲ್ಲಿ ಜುಲೈ 19, 2025ರ ಸಂಜೆ 6.30ಕ್ಕೆ ಗಾನ ಕಲಾಶ್ರೀ ವಿದುಷಿ ಶ್ರೀಮತಿ ಎಂ. ಎಸ್. ಶೀಲಾ ಅವರ ಶಿಷ್ಯೆ ವಿದುಷಿ ಅಂಜಲಿ ಶ್ರೀರಾಮ ಅವರಿಂದ ಕರ್ನಾಟಕ ಸಂಗೀತದ ಹಾಡುಗಾರಿಕೆ ಆಯೋಜಿಸಲಾಗಿತ್ತು.

ಶ್ರೀಮತಿ ಶ್ಯಾಮಲಾ ರಾಧೇಶ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

ಅಂಜಲಿಯವರು ಮುತ್ತಯ್ಯ ಭಾಗವತರ್ ಅವರ 'ಮಾತೆ ಮಲಯಾಚಲ ಭಾಗ್ಯದಾತೆ'ಯೊಂದಿಗೆ ಆರಂಭಿಸಿದರು. ಮುಂದುವರಿಸುತ್ತ ಪುರಂದರದಾಸರ 'ಜಯ ಜಾನಕಿರಾಮ' ನೆರವಲ್ ಹಾಕಿ ಹಾಡಿ ರಂಜಿಸಿದರು. ನಂತರ ಅವರ ಗುರುಗಳ ಗುರುಗಳಾದ ಶ್ರೀಯುತ ವಿದ್ವಾನ್ ಆರ್. ಕೆ. ಶ್ರೀಕಂಠನ್ ರಚಿತ ಗೀತೆ ಹಾಡಿದರು. ತ್ಯಾಗರಾಜರ 'ಶ್ರೀರಾಮ ನಿನ್ನೆ ನಮ್ಮಿಂಚೆನು' ಸೊಗಸಾಗಿ ಮೂಡಿ ಬಂತು.



ಒಟ್ಟು ಒಂದೂವರೆ ತಾಸು ಸುಂದರ ಗಾಯನದಿಂದ ನೆರೆದ ಸಭಿಕರ ಮನ ಸೂರೆಗೊಂಡರು. ಇವರನ್ನೂ, ಸಹ ಕಲಾವಿದರಾದ ವಿದ್ವಾನ್ ಸತೀಶ್ ಶೇಷಾದ್ರಿ (ಪಿಟೀಲು), ವಿದ್ವಾನ್ ರಘು ಭಾಗವತ್ ಬಿ. ಆರ್. (ಮೃದಂಗ) ಮೈಸೂರು ಅಸೋಸಿಯೇಶನ್ನಿನ ಅಧ್ಯಕ್ಷೆ ಕಮಲಾ ಸ್ಮರಣಿಕೆಗಳನ್ನು ಕೊಟ್ಟು ಸನ್ಮಾನಿಸಿದರು. ಶ್ರೀಯುತ ಶಶಿಕಾಂತ ಜೋಶಿಯವರು ವಂದನಾರ್ಪಣೆ ಸಲ್ಲಿಸಿದರು.





ನೇಸರು ತಿಂಗಳೋಲೆ

ಸಂಪುಟ 43 ಆಗೋಸ್ತು 2025 ಸಂಚಿಕೆ 8

ಗೌ. ಸಂಪಾದಕರು
**ಡಾ. ಜ್ಯೋತಿ ಸತೀಶ್**

❖ ❖ ❖

ಸಂಪಾದಕ ಮಂಡಳಿ:
**ಡಾ. ಮಂಜುನಾಥ್**
**ಕೆ. ಮಂಜುನಾಥಯ್ಯ**
**ಕೆ. ಕಮಲ**
**ನಾರಾಯಣ ನವಿಲೇಕರ್**
**ಗಣಪತಿ ಶಂಕರಲಿಂಗ**

❖ ❖ ❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

❖ ❖ ❖

ಸಂಪರ್ಕ ವಿಳಾಸ:
**ನೇಸರು**
ಮೈಸೂರು ಅಸೋಸಿಯೇಷನ್
393, ಭಾವುದಾಜಿರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065

Email:
mysoreassociation.mumbai@gmail.com
Website:
www.mysoreassociation.in

# ಪರಿಶುದ್ಧವಾದ ಭಕ್ತಿ



ನಮ್ಮ ನಾಡು ಹಲವು ಧರ್ಮಗಳ ಗೂಡು. ಪ್ರತಿಯೊಂದು ಸಮುದಾಯವೂ ಬೇರೆ ಬೇರೆ ರೀತಿಯ ಆಚಾರ ವಿಚಾರವನ್ನು ಅನುಸರಿಸಿಕೊಂಡು ಬರುತ್ತಿದೆ. ನಮ್ಮಲ್ಲಿ ಅನೇಕ ಹಬ್ಬ ಹರಿದಿನಗಳನ್ನು ಆಚರಿಸಲಾಗುತ್ತದೆ. ಎಲ್ಲ ಸಮುದಾಯವು ತಮ್ಮ ತಮ್ಮ ಹಬ್ಬಗಳನ್ನು ಬಹಳಷ್ಟು ಸಂಭ್ರಮ, ವಿಜೃಂಬಣೆಯಿಂದ ಆಚರಿಸುತ್ತಾರೆ. ಈ ಹಬ್ಬ ಹರಿದಿನಗಳು ಒಂದು ರೀತಿಯಲ್ಲಿ ಒಗ್ಗಟ್ಟಿನ, ನೆಮ್ಮದಿಯ ಸಂಕೇತವಾದರೆ, ಇನ್ನೊಂದು ರೀತಿಯಲ್ಲಿ ನಮ್ಮ ಸಂಸ್ಕೃತಿಯ, ಪರಂಪರೆಯ ಪ್ರತಿಬಿಂಬವೂ ಹೌದು.

ಹಬ್ಬ ಹರಿದಿನಗಳು ಹತ್ತಿರ ಬರುತ್ತಿದ್ದಂತೆ ನಮಗೇ ತಿಳಿಯದ, ಒಂದು ರೀತಿಯ ಉತ್ಸಾಹ, ಹುಮ್ಮಸ್ಸು ನಮ್ಮಲ್ಲಿ ಹರಿದಾಡುತ್ತದೆ. ಒಂದಾದ ಮೇಲೆ ಒಂದು ಹಬ್ಬಗಳ ಸರದಿ ಬರುತ್ತಿರುತ್ತದೆ. ಒಂದು ಹಬ್ಬ ಮುಗಿದರೆ, ಒನ್ನೊಂದು ಹಬ್ಬದ ಆಗಮನವನ್ನು ನಿರೀಕ್ಷಿಸುತ್ತೇವೆ. ಆ ನಿರೀಕ್ಷಣೆಯಲ್ಲಿ ದಿನಗಳು ಕಳೆದದ್ದು ಗೊತ್ತಾಗುವುದೇಇಲ್ಲ.

ಈ ಹಬ್ಬ ಹರಿದಿನಗಳು ಮನುಷ್ಯರ ನಡುವಿನ ಬಾಂಧವ್ಯವನ್ನು ಹೆಚ್ಚಿಸುತ್ತದೆ. ಈ ಹಬ್ಬ ಹರಿದಿನಗಳು ಮಾನವೀಯ ನೆಲೆಯಲ್ಲಿಯೇ ವೈವಿಧ್ಯತೆಯಲ್ಲಿ ಐಕ್ಯತೆಯನ್ನು ಸಾರುತ್ತವೆ. ಈ ಹಬ್ಬ ಹರಿದಿನಗಳು ಮಾನವನಲ್ಲಿ ಅಲೌಕಿಕ ದೈವೀಶಕ್ತಿಯನ್ನು ಹುಟ್ಟಿಸುತ್ತದೆ. ಹಬ್ಬಗಳೆಂದರೆ ಕೇವಲ ವಿಶೇಷ ಭೋಜನ ಮಾತ್ರವಲ್ಲ. ಇದೊಂದು ಸಾಂಸ್ಕೃತಿಕ ಚಟುಚಟಿಕೆಯಾಗಿರುವುದರ ಜೊತೆಗೆ ಧಾರ್ಮಿಕ ಮೌಲ್ಯತೆಯುಳ್ಳದ್ದು ಆಗಿರುತ್ತದೆ ಎನ್ನುವುದನ್ನು ಮರೆಯುವಂತಿಲ್ಲ. ಪ್ರತಿ ಹಬ್ಬವನ್ನು ಒಬ್ಬೊಬ್ಬ ದೇವರಿಗೆ ಅದನ್ನು ಮೀಸಲಾಗಿರುಸುತ್ತೇವೆ. ಭಕ್ತಿಯಿಂದ, ಶ್ರದ್ಧೆಯಿಂದ ದೇವರನ್ನು ಬೇಡಿಕೊಳ್ಳುತ್ತೇವೆ. ಹಬ್ಬದ ದಿನ ನಾವು ಮಾಡಿದ್ದೆಲ್ಲವನ್ನು ದೇವರಿಗೆ ನೈವೇದ್ಯದ ರೂಪದಲ್ಲಿ ಅರ್ಪಿಸುತ್ತೇವೆ. ಅರ್ಪಣೆಯಲ್ಲಿ ಪರಿಶುದ್ಧವಾದ ಭಕ್ತಿಯಿದ್ದರೆ ಮಾತ್ರ ಅದು ದೇವರಿಗೆ ಸಲ್ಲುತ್ತದೆ.

ಒಮ್ಮೆ ಒಬ್ಬ ಬಡ ರೈತ ಶಿವರಾತ್ರಿಯ ಸಮಯದಲ್ಲಿ ದೇವರಿಗೆ ಅರ್ಪಿಸಲೆಂದು ತನ್ನ ಹಿತ್ತಲಲ್ಲಿ ಬೆಳೆದ ಒಣಗಿ ಹೋಗಿದ್ದ ಶಂಖ ಪುಷ್ಪಗಳನ್ನು ಶಿವ ದೇವಸ್ಥಾನಕ್ಕೆ ತರುತ್ತಾನೆ. ಅವನಲ್ಲಿ ಏನೂ ಉಳಿದಿಲ್ಲ. ಮಳೆ ಇಲ್ಲದೆ ಬೆಳೆದ ಬೆಳೆಯೂ ನಾಶವಾಗಿ ಮನೆ ಮಂದಿಯೆಲ್ಲ ಉಪವಾಸದಲ್ಲಿ ದಿನ ಕಳೆಯುತ್ತಿದ್ದ ದಿನಗಳವು. ಎಲ್ಲರೂ ವಿವಿಧ ಬಗೆಯ ಭಕ್ಷ್ಯಗಳನ್ನು ಕೊಂಡೊಯ್ಯುವಾಗ, ರೈತ ತನ್ನ ಮನೆಯ ಹಿತ್ತಲಲ್ಲಿದ್ದ ಒಣಗಿ ಹೋಗುತ್ತಿರುವ ಶಂಖ ಪುಷ್ಪಗಳನ್ನು ತೆಗೆದುಕೊಂಡು ಹೋಗುತ್ತಾನೆ. ದೇವಸ್ಥಾನದ ಪೂಜಾರಿ ಆ ಒಣಗಿ ಹೋಗಿದ್ದ ಶಂಖ ಪುಷ್ಪಗಳನ್ನು ದೇವರಿಗೆ ಅರ್ಪಿಸಲು ಬಿಡುವುದಿಲ್ಲ. ಇದರಿಂದ ವ್ಯಥೆಗೊಂಡ ಆ ಬಡ ರೈತ ದೇವಸ್ಥಾನದ ಬಾಗಿಲಲ್ಲಿ ನಿಂತು, ಶಿವನನ್ನು ಭಕ್ತಿಯಿಂದ ನೆನೆಯುತ್ತಾನೆ. ನನ್ನಲ್ಲಿ ನಿನಗೆ ಕೊಡಲಿಕ್ಕೆ ಏನೂ ಇಲ್ಲ. ಮನೆಯಲ್ಲಿ ಊಟಕ್ಕೆ ಗತಿಯಿಲ್ಲದಿದ್ದರಿಂದ ಎಲ್ಲರೂ ಉಪವಾಸದಲ್ಲಿರುವರು. ನನಗೆ ನಿನ್ನಲ್ಲಿರುವ ಈ ಭಕ್ತಿ ಸತ್ಯವಾಗಿದ್ದರೆ ಈ ಶಂಖ ಪುಷ್ಪಗಳನ್ನು ಅರ್ಪಿಸಿಕೋ ಎಂದು ಕಣ್ಣೀರು ಸುರಿಸುತ್ತಾ ಬೇಡಿಕೊಳ್ಳುತ್ತಾನಂತೆ. ಆಗ ಅದೆಲ್ಲಿಂದಲೋ ರಭಸದಿಂದ ಬಂದ ಗಾಳಿ, ರೈತನ ಕೈಯಲ್ಲಿದ್ದ ಶಂಖ ಪುಷ್ಪಗಳನ್ನು ಹಾರಿಸಿಕೊಂಡು ಹೋಯಿತಂತೆ. ಕೊನೆಗೆ ಅದು ಹೋಗಿ ಸೇರಿದ್ದು ಶಿವಲಿಂಗದ ಮೇಲೆ. ಯಾವುದನ್ನು ಅರ್ಪಿಸಕೂಡದು ಎಂದಿದ್ದ ಒಣ ಹೂವು ಶಿವಲಿಂಗದ ಮೇಲೆ ಕುಳಿತದ್ದನ್ನು ಕಂಡು ಪೂಜಾರಿ ಆಶ್ಚರ್ಯ ಚಕಿತನಾದ ಜೊತೆಗೆ ತನ್ನ ಅಜ್ಞಾನಕ್ಕೆ ನಾಚಿಕೆ ಪಟ್ಟುಕೊಂಡನಂತೆ. ಕೊನೆಗೆ ಆ ಬಡ ರೈತನನ್ನು ಒಳ ಕರೆದು ನೀನೇ ನಿನ್ನ ಕೈಯಾರೆ ಈ ಹೂವುಗಳನ್ನು ದೇವರ ಮುಡಿಗೇರಿಸು ಎಂದು ಬೇಡಿಕೊಂಡನಂತೆ.

ಹೀಗೆ ನಮ್ಮಲ್ಲಿ ಶ್ರದ್ಧೆಯಿದ್ದರೆ ನಾವು ಏನನ್ನೂ ಅರ್ಪಿಸಿದರೂ ಅದು ದೇವರಿಗೆ ಸಲ್ಲುತ್ತದೆ. ಶಿವರಾಮ ಕಾರಂತರು ಒಂದೆಡೆ ಹೇಳುತ್ತಾರೆ, "ನಾವು ದೇವರಲ್ಲಿ ಬುದ್ಧಿ ಕೊಡು ಎಂದು ಕೇಳುತ್ತೇವೆ. ಆದರೆ ದೇವರು ಸೃಷ್ಟಿ ಮಾಡುವಾಗ ಬುದ್ಧಿ ಕೊಡದೆ ಹುಟ್ಟಿಸುತ್ತಾನೆಯೇ?"ಎಂದು ಪ್ರಶ್ನೆ ಮಾಡುವುದನ್ನು ಗಮನಿಸಬಹುದು. ಹೌದು.. ನಾವು ಒಮ್ಮೊಮ್ಮೆ ದೇವರಲ್ಲಿ ಏನೇನೆಲ್ಲ ಬೇಡಿಕೊಳ್ಳುತ್ತೇವೆ. ದೇವರು ಸೃಷ್ಟಿ ಮಾಡುವಾಗ ಯಾರ್‍ಯಾರಿಗೆ ಏನೇನು ಕೊಡಬೇಕೊ ಅಷ್ಟಷ್ಟನ್ನು ಕೊಟ್ಟೇ ಸೃಷ್ಟಿಸುತ್ತಾನೆ. ದೇವರು ಕೊಟ್ಟಿದ್ದನ್ನೆ ನಾವು ಅವನಿಗೆ ಲಂಚದ ರೂಪದಲ್ಲಿ ಅರ್ಪಿಸುತ್ತೇವೆ. ನಿನಗೆ ಅದುಕೊಡುತ್ತೇನೆ, ಇದು ಕೊಡುತ್ತೇನೆ ಎಂದೆಲ್ಲ ಹರಕೆ ಕಟ್ಟಿಕೊಳ್ಳುತ್ತೇವೆ. ಒಮ್ಮೊಮ್ಮೆ ಅನಿಸುತ್ತದೆ ನಮ್ಮ ಬುದ್ದಿ ಎಷ್ಟೊಂದು ಬಾಲಿಶವಾದುದು ಎಂದು. ಒಟ್ಟಿನಲ್ಲಿ ದೇವರಿಗೆ ಬೇಕಾಗಿರೋದು ಪರಿಶುದ್ಧವಾದ ಭಕ್ತಿ. ಅರ್ಪಣೆಯಲ್ಲೂ ದೇವರು ಬಯಸುವುದು ಪರಿಪೂರ್ಣತೆಯನ್ನು ಮಾತ್ರ.

**– ಡಾ. ಜ್ಯೋತಿ ಸತೀಶ್**

## ಪ್ರವಾಸದ ಅನುಭವ ಕಥನ

# ಬೆಂಗಳೂರಿನ ಸುತ್ತಮುತ್ತ



✍ ಡಾ. ಸುಮಾ ದ್ವಾರಕಾನಾಥ್

ತ್ಯಾಮಗೊಂಡ್ಲಿನ ಓಡಾಟ ಮುಗಿದ ಮೇಲೆ, ಬೆಂಗಳೂರಿನ ಸುತ್ತಮುತ್ತ ಇರುವ ಪ್ರೇಕ್ಷಣೀಯ ಸ್ಥಳಗಳಿಗೆ ಹೋಗುವ ಅವಕಾಶ ಸಿಕ್ಕಿತು. ಅದೂ ಪ್ರಥಮ ಚುಂಬನ ದಂತಭಗ್ನ ಎನ್ನುವ ಹಾಗೆ, ತಿಪ್ಪಗೊಂಡನಹಳ್ಳಿಯಲ್ಲಿರುವ ಅರ್ಕಾವತಿ ಡ್ಯಾಮ್‌ಗೆ ಶಾಲೆಯಿಂದ ಪ್ರವಾಸ ಏರ್ಪಡಿಸಿದ್ದರು. ನಾನು ಮನೆಯಲ್ಲಿ ಕಾಡಿ ಬೇಡಿ 2 ರೂಪಾಯಿ ಪಡೆದು ಕೊಟ್ಟರೆ, ಆ ಪ್ರವಾಸವನ್ನೇ ರದ್ದುಗೊಳಿಸಲಾಯಿತು. ನನಗೆ ತಲೆ ಮೇಲೆ ಪ್ರಪಂಚವೇ ಕಳಚಿ ಬಿದ್ದಂತಾಗಿತ್ತು. ಪ್ರವಾಸದ ಅದೃಷ್ಟವೇ ಇಲ್ಲವೇನೋ ಎನ್ನುವವಳಿಗೆ ಕಾಲಿಗೆ ಚಕ್ರ ಕಟ್ಟಿದಂತೆ ಪ್ರವಾಸದ ಸರಮಾಲೆಯೇ ಜೀವನದಲ್ಲಿ ಮುಂದುವರೆಯಿತು.  ಮುಂದೆ ಯಾವ ಗುಂಪು ಎಲ್ಲಿಗೆ ಹೊರಟರೂ ಥೈ ಅಂತ ನಾನೂ ಹೊರಡುವ ಧೈರ್ಯ ಬಂತು.

ಜಲಪಾತಗಳ ಹಾದಿ ಹಿಡಿದು ಬೆಂಗಳೂರಿಗೆ 90 ಕಿ.ಮೀ. ದೂರದಲ್ಲಿರುವ ಮೇಕೆದಾಟು ಎನ್ನುವ ಸಣ್ಣ ಜಲಪಾತಕ್ಕೆ , ಯಾವುದೋ ಖಾಸಗಿ ಹಿಂದಿ ತರಗತಿಯವರೊಡನೆ ಒಂದು ದಿನದ ಪ್ರವಾಸಕ್ಕೆ ಹೋಗುವ ಅವಕಾಶ ಸಿಕ್ಕಿತ್ತು. ನಾನು ಕಲಾಸಿಪಾಳ್ಯಕ್ಕೆ ತಲಪುವ ಮುಂಚೆಯೇ ಬಸ್ ನಲ್ಲಿ ಯಾರೋ ನನ್ನ ಪರ್ಸ್ ಹಾರಿಸಿದ್ದರು. ಪೆಚ್ಚಾದರೂ ಬರೀ ಕೈಯ್ಯಲ್ಲಿ ಮನೆಗೆ ವಾಪಸ್ಸು ಬರಲಿಚ್ಛಿಸದೆ ನನ್ನ ಚಿಕ್ಕಮ್ಮನ ಮಗಳ ಜೊತೆ ಹಾಗೇ ಹೊರಟೆ.

ಕನಕಪುರದ ಮಾರ್ಗವಾಗಿ ಅರ್ಕಾವತಿ ನದಿ ಸುಮಾರು 32 ಕಿ.ಮೀ. ಮೈದಾನದಲ್ಲಿ ಹರಿದು, ಅರಣ್ಯವನ್ನು ಹೊಕ್ಕು, ಕಾವೇರಿಯನ್ನು ಸಂಗಮ ಎನ್ನುವೆಡೆ ಸೇರುತ್ತದೆ. ಅಲ್ಲಿ ಸಂಗಮೇಶ್ವರನ ದೇವಾಲಯ ಮತ್ತು ಒಂದು ಪ್ರವಾಸಿ ಮಂದಿರವೂ ಇದೆ. ಇಲ್ಲಿಂದ ಅರ್ಕಾವತಿಯನ್ನು ದಾಟಿ ಕಾವೇರಿಯ ಎಡ ದಂಡೆಯ ಮೇಲೆ ಸುಮಾರು 5 ಕಿ.ಮೀ. ದೂರದಲ್ಲಿ ಮೇಕೆದಾಟು ಸಿಗುತ್ತದೆ. ಮೇಕೆದಾಟು, ಕಾವೇರಿ ನದಿ ಹರಿಯುವ ಕಿರಿದಾದ ಆಳವಾದ ಕಂದರಗಳಿಂದ ಕೂಡಿದೆ. ಇದಕ್ಕೆ ಸಂಬಂಧಿಸಿದಂತೆ ಒಂದು ಆಸಕ್ತಿದಾಯಕ ಪೌರಾಣಿಕ ಕಥೆಯೂ ಇದೆ. ಸ್ಥಳೀಯರಲ್ಲಿ ಜನಪ್ರಿಯವಾಗಿರುವ ಪುರಾತನ ಕಥೆಯ ಪ್ರಕಾರ, ಹುಲಿಯೊಂದು ಮೇಕೆಯನ್ನು ಬೆನ್ನಟ್ಟುತ್ತಿರುತ್ತದೆ. ಮೇಕೆಯು ತನ್ನ ಪ್ರಾಣ ಉಳಿಸಿಕೊಳ್ಳಲು ಹೆದರಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹಾರುತ್ತದೆ. ಆ ಜಾಗ ಎಷ್ಟು ಚಿಕ್ಕದಾಗಿತ್ತೆಂದರೆ ಮೇಕೆ ಮಾತ್ರ ಹಾದುಹೋಗುವಷ್ಟಿರುತ್ತದೆ.  ಹಾಗಾಗಿ ಹುಲಿಗೆ ಅದನ್ನು ಬೆನ್ನಟ್ಟಲು ಸಾಧ್ಯವಾಗುವುದಿಲ್ಲ. ಅದಕ್ಕೆ ಈ ಹೆಸರು ಬಂದಿದೆ ಎನ್ನುತ್ತಾರೆ. ಇಲ್ಲಿನ ಬಂಡೆಗಳಲ್ಲಿ ವಿಚಿತ್ರ ರಂಧ್ರಗಳ ಆಕಾರಗಳು ಮೇಕೆಯ ಕಾಲುಗಳನ್ನು ಹೋಲುವುದರಿಂದ ಆ ಮೇಕೆಯೇ ಶಿವನ ರೂಪವೆಂದು ಜನರು ನಂಬುತ್ತಾರೆ. ಅಲ್ಲಿ ಸುತ್ತಮುತ್ತಲೂ ಆಗ ಸರಿಯಾದ ಊಟದ ವ್ಯವಸ್ಥೆ ಇಲ್ಲದ್ದರಿಂದ ಎರಡು ದೊಡ್ಡ ದೊಡ್ಡ ಪಾತ್ರೆಗಳಲ್ಲಿ ಬೆಂಗಳೂರಿನ ಭರ್ಜರಿ ಊಟ ಬಿಸಿಬೇಳೆ ಭಾತ್ ಮತ್ತು ಮೊಸರನ್ನ ತಂದಿದ್ದರು. ಎಲ್ಲರೂ ಕಲಾಸಿಪಾಳ್ಯದಿಂದ ಹೊರಡಬೇಕಾಗಿದ್ದರಿಂದ ಖಾಸಗಿ ಬಸ್‌ನಲ್ಲಿ ಮುಕ್ಕಾಲು ದಾರಿ ತಲುಪಿದ್ದೆವು.  ಅಲ್ಲಿಂದ ಮುಂದೆ ಸಾರಿಗೆ ವ್ಯವಸ್ಥೆ ಇರಲಿಲ್ಲ. ದಾರಿಯಲ್ಲಿ ಒಂದು ಲಾರಿ ಕಂಡು ಅವನನ್ನೇ ಬೇಡಿಕೊಂಡು ಹತ್ತಿದೆವು. ಊಟದ ಪಾತ್ರೆ ಸಾಗಿಸುವಾಗ ಸಂಘಟಿಕರ ಕೈಮೇಲೆ ಬಿಸಿಯಾದ ಬಿಸಿಬೇಳೆಭಾತ್ ಬಿದ್ದು ಅನಾಹುತವಾಯ್ತು. ತಕ್ಷಣ ಅವರ ಕೈಗೆ ತಣ್ಣೀರು ಸುರಿದು, ಪ್ರಥಮ ಚಿಕಿತ್ಸೆ ಮಾಡಲಾಯಿತು. ಇನ್ನೇನೂ ನೆನಪಿಲ್ಲದಿದ್ದರೂ, ಅಂದಿನ ಆ ಘಟನೆ ಇಂದಿಗೂ ಮರೆಯಲಾಗಿಲ್ಲ.

ಮುತ್ಯಾಲಮಡುವು –  ಒಂದು ಸಣ್ಣ ಜಲಪಾತ. ಇದು ಅನೇಕಲ್ ಪಟ್ಟಣದಿಂದ ಸುಮಾರು 5 ಕಿ.ಮೀ. ದೂರದಲ್ಲಿದೆ. ಸುತ್ತಲೂ ಹರಡಿಕೊಂಡಿರುವ ಹಸಿರ ಸಿರಿಯ ಕಾರಣದಿಂದ ಈ ಜಾಗ ಮನಸ್ಸಿಗೆ ಉಲ್ಲಾಸವನ್ನು ಕೊಡುತ್ತದೆ. ಬೀಸುವ ತಂಗಾಳಿಯ ನಡುವೆ ಮೆಟ್ಟಿಲು ಇಳಿಯುತ್ತಾ ಹೋಗುವುದೇ ಒಂದು ಖುಷಿ. ಸುಮಾರು 100 ಅಡಿ ಎತ್ತರದಿಂದ ಬೀಳುವ ನೀರು ಮುತ್ತಿನಂತೆ ಗೋಚರಿಸುತ್ತದೆ. ಈ ಜಾಗವನ್ನು ಪರ್ಲ್ ವ್ಯಾಲಿ ಎಂದೂ ಕರೆಯುತ್ತಾರೆ. ಪಕ್ಕದಲ್ಲಿಯೇ ಒಂದು ಶಿವನ ದೇವಾಲಯವೂ ಇದೆ. ಇಲ್ಲಿನ ಬೃಹತ್ ಕೆರೆ ಕೂಡಾ ನೋಡಲು ಅಂದವಾಗಿದೆ.

ಮುತ್ಯಾಲ ಮಡುವಿನ ಹೆಸರು ತೆಲುಗು ಭಾಷೆಯಲ್ಲಿ ಮುತ್ಯಾಲ ಅಂದರೆ ಮುತ್ತುಗಳು, ಮಡುವು – ಮಡು ಪದದಿಂದ ಬಂದಿದೆ. ಇಲ್ಲಿ ಶಂಖು ಚಕ್ರದಿಂದ ಮುತ್ತಿನ ಹನಿಗಳಂತೆ ಝರಿ ಹರಿಯುವುದರಿಂದ ಈ ಹೆಸರು ಬಂದಿದೆ. ಇಲ್ಲಿ ಮುತ್ಯಾಲ ಸ್ವಾಮಿ ದೇವಾಲಯವಿದೆ. ಈ ಪ್ರವಾಸದ ನೆನಪು ಉಳಿದಿದ್ದರೂ, ಯಾರೊಂದಿಗೆ ಹೋಗಿದ್ದೆನೋ ಅದರ ನೆನಪು ಮಾತ್ರ ಉಳಿದಿಲ್ಲ. ಅದರ ದೃಶ್ಯವಂತೂ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ.

ನಮ್ಮ ರೋಡ್ ನೋರೆಲ್ಲಾ ಸೇರಿ ಇನ್ನೊಂದು ಸಲ, ಹೊಗೇನಕಲ್ ಫಾಲ್ಸ್‌ಗೆ ಪ್ರವಾಸ ಏರ್ಪಡಿಸಿದ್ದರು. ಬೆಂಗಳೂರಿನಿಂದ ಸುಮಾರು 180 ಕಿ.ಮೀ. ದೂರದಲ್ಲಿರುವ ಇದನ್ನು ಭಾರತದ ನಯಾಗರ ಜಲಪಾತವೆಂದೆ ಕರೆಯುತ್ತಾರೆ. ಬಂಡೆಗಳ ಮೇಲೆ ಅಪ್ಪಳಿಸುವ ನೀರು ಹೊಗೆಯಂತೆ ಹೊರಹೊಮ್ಮುತ್ತದೆ. ಇದು ಕರ್ನಾಟಕ–ತಮಿಳುನಾಡು ರಾಜ್ಯಗಳ ಗಡಿಯಲ್ಲಿದೆ. ಇಲ್ಲಿ ಕಾವೇರಿ ನದಿ ಕವಲುಗಳಾಗಿ ಬಂಡೆಗಳ ನಡುವೆ ಹರಿದು, ತಮಿಳುನಾಡಿಗೆ ಬೃಹನ್ನದಿಯಾಗಿ ಪ್ರವೇಶಿಸುತ್ತಾಳೆ. ಇದೊಂದು ನೈಸರ್ಗಿಕವಾದ ಭೋರ್ಗರೆಯುವ ಜಲಪಾತ. ಇಲ್ಲಿ ಮೂಲ ಜಲಪಾತವನ್ನು ತಲುಪಲೇ ದೊಡ್ಡ ಬಿದಿರಿನ ತಟ್ಟೆಯಂತಿರುವ  ದೇಸೀ ದೋಣಿಯಲ್ಲಿ (ತೆಪ್ಪ) ನೀರನ್ನು  ಹಾಯಬೇಕಾಗುತ್ತದೆ. ಅದಂತೂ ಬಹಳ ಭಯಾನಕ ಅನುಭವ ನೀಡುತ್ತದೆ. ಮೂಲ ಜಲಪಾತದ ಹತ್ತಿರ ಹೋಗಲೂ ತೆಪ್ಪದಲ್ಲೇ ಹೋಗಬೇಕು. ಮೂಲ

ಜಲಪಾತದ ಸುತ್ತಲೂ ಒಂದು ಸುತ್ತು ತೆಪ್ಪದಲ್ಲೇ ಕರೆದುಕೊಂಡು ಹೋಗುತ್ತಾರೆ. ಔಷಧಯುಕ್ತ ನೀರಾದ್ದರಿಂದ ಸ್ನಾನವನ್ನೂ ಮಾಡಬಹುದು. ತೆಪ್ಪದ ಅಂಗಡಿಗಳೂ ಓಡಾಡುತ್ತಿರುತ್ತವೆ. ಅಲ್ಲಿಯೂ ಸರಿಯಾದ ಊಟ ಸಿಗದಿದ್ದುದರಿಂದ ನಾವೇ ಕಟ್ಟಿಕೊಂಡು ಹೋಗಿದ್ದೆವು. ಬರುವಾಗ ಕೃಷ್ಣಗಿರಿ ಜಿಲ್ಲೆಯಲ್ಲಿರುವ ತೆನ್ ಪೆನ್ನಯ್ ನದಿಗೆ ಅಡ್ಡಲಾಗಿ ಕಟ್ಟಿರುವ ಕೃಷ್ಣಗಿರಿ ಡ್ಯಾಮ್‌ನ ಸಹಿತ ನೋಡಿಬಂದೆವು.

ಪ್ರತಿವರ್ಷ ಮನೆದೇವರಾದ ದೇವರಾಯನ ದುರ್ಗದ ಬೆಟ್ಟದಲ್ಲಿರುವ ನರಸಿಂಹಸ್ವಾಮಿಯ ತೇರಿಗೆ ಹೋಗಿ ಬರುತ್ತಿದ್ದೆವು. ಅಲ್ಲಿನ ಜಯಮಂಗಲಿಯಲ್ಲಿ ಶಿಂಷಾ ನದಿಯ ಉಗಮವನ್ನು ನೋಡುತ್ತಿದ್ದೆವು. ಅಲ್ಲಿಂದ ಸುಮಾರು 250 ಕಿ.ಮೀ. ದೂರ ಹರಿದು ಬಂದು ಶಿಂಷಾ ನದಿ, ಕಾವೇರಿಯ ಒಡಲನ್ನು ಸೇರುವ ಮೊದಲು ಶಿಂಷಾಪುರ ಎಂಬ ಊರಲ್ಲಿ ಜಲಪಾತವಾಗಿ ಧುಮ್ಮಿಕ್ಕಿ ತನ್ನ ಸೌಂದರ್ಯ ಮೆರೆದಿದೆ. ಇದು ಕಾವೇರಿ ನದಿಯ ಉಪನದಿಯೂ ಆಗಿದೆ. ಶಿಂಷಾ ನದಿ ಈ ಊರಿನ ಹತ್ತಿರ ಜಲಪಾತ ನಿರ್ಮಿಸಿರುವ ಕಾರಣ ಶಿಂಷಾ ಎಂದೂ ಕರೆಯುತ್ತಾರೆ. ಒಂದು ಸಲ ಮನೆಯವರೆಲ್ಲ ಸೇರಿ ಶಿವನ ಸಮುದ್ರದ ಜಲಪಾತ ನೋಡಲು ಹೊರೆಟೆವು. ಅದು ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನಲ್ಲಿದೆ. ಶಿವನ ಸಮುದ್ರ ದ್ವೀಪ ಪಟ್ಟಣದ ಅವಳಿ ಜಲಪಾತಗಳು, ಕಾವೇರಿನದಿಯ ದಂಡೆಯಲ್ಲಿ ಎರಡು ಕವಲುಗಳಾಗಿ ಗಗನ ಚುಕ್ಕಿ ಮತು ಭರಚುಕ್ಕಿ ಎಂಬ ಎರಡು ಜಲಪಾತಗಳನ್ನು ಸೃಷ್ಟಿಸಿದೆ. ಇದು ಸಹಜವಾಗಿ ನದಿಗಳ ನಾಲ್ಕನೇ ದೊಡ್ಡ ದ್ವೀಪ ಸೃಷ್ಟಿಸಿದೆ. ಪ್ರಾಚೀನ ದೇವಾಲಯಗಳ ಗುಂಪನ್ನು ಇಲ್ಲಿ ಕಾಣಬಹುದು. ಪಶ್ಚಿಮಶಾಖೆ ಗಗನ ಚುಕ್ಕಿ ಜಲಪಾತವನ್ನು ಸೃಷ್ಟಿಸಿದ್ದರೆ, ಪೂರ್ವ ಶಾಖೆ ಭರಚುಕ್ಕಿ ಜಲಪಾತವನ್ನು ಸೃಷ್ಟಿಸಿದೆ. ಗಗನಚುಕ್ಕಿ ಜಲಪಾತದ ಎತ್ತರ ಹಾಗೂ ರಭಸ ಹೆಚ್ಚು. ಆದರೆ ಭರಚುಕ್ಕಿ ಜಲಪಾತದ ನೀರಿನ ಪ್ರಮಾಣ ಕಡಿಮೆ. ಕಣಿವೆ ಕೊಳ್ಳಗಳ ಪ್ರದೇಶವಾದ್ದರಿಂದ ಜಲಪಾತಗಳ ತಳಕ್ಕೆ ಇಳಿಯುವುದು ಕಠಿಣ ಹಾಗೂ ಅಪಾಯಕಾರಿ.

ಇಲ್ಲಿ ಜಲ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಲಾಗಿದೆ. 1902ರಲ್ಲಿ ಅಂದಿನ ಮೈಸೂರು ಮಹಾರಾಜರಾದ ನಾಲ್ಕನೇ ಕೃಷ್ಣರಾಜ ಒಡೆಯರ್‌ರವರ ಆಡಳಿತ ಕಾಲದಲ್ಲಿ, ದಿವಾನ್ ಶೇಷಾದ್ರಿ ಅಯ್ಯರ್ ಅವರ ಉತ್ಸಾಹದೊಂದಿಗೆ ಈ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿತ್ತು. ಈ ಯೋಜನೆಯು 17,200 ಕಿಲೋವ್ಯಾಟ್ ವಿದ್ಯುದುತ್ಪಾದನೆಯ ಸಾಮರ್ಥ್ಯ ಹೊಂದಿದೆ. ಇಡೀ ಏಷ್ಯಾಖಂಡದಲ್ಲಿಯೇ ಸ್ಥಾಪನೆಯಾದ ಮೊಟ್ಟ ಮೊದಲ ಕೇಂದ್ರವೆಂಬ ಹೆಗ್ಗಳಿಕೆ ಇದಕ್ಕಿದೆ. ಇಷ್ಟೇ ಅಲ್ಲದೆ ಈ ಜಲ ವಿದ್ಯುತ್ ಉತ್ಪಾದನಾ ಕೇಂದ್ರದಿಂದ ಮೊದಲ ಬಾರಿಗೆ ದೂರದ ಕೋಲಾರಕ್ಕೆ ವಿದ್ಯುತ್ ಅನ್ನು ಕಳಿಸಲಾಗಿತ್ತು. ನಂತರ ಬೆಂಗಳೂರಿಗೆ 1937ರಲ್ಲಿ ವಿದ್ಯುತ್ ಪೂರೈಸಿದ ಮಾಹಿತಿ ಹೊಂದಿದೆ.

ಜೋಗ್ ಜಲಪಾತ– ಜೋಗ್‌ಗೆ ಹೋಗುವ ಅವಕಾಶ ಮೂರು ಸಲ ಒದಗಿದ್ದು ,ವಿಭಿನ್ನ ಅನುಭವಗಳನ್ನು ನೀಡಿದೆ . ಮೊದಲ ಸಲ ಟಿ.ಟಿ. ಕಂಪನಿಯ ಸದಸ್ಯರೊಂದಿಗೆ ಪ್ರವಾಸ ಮಾಡಲು ಸಿಕ್ಕ ಅವಕಾಶ. ಹೊಸ ಜನ, ಹೊಸ ಪರಿಚಯ, ಹೊಸ ಪರಿಸರಗಳ ಅನ್ವೇಷಣೆ, ಅದೊಂದು ರೀತಿಯ ಮುದ ಕೊಟ್ಟಿತ್ತು. ಪ್ರವಾಸಿಗರಾಗಿ ಬಂದ ಪುರುಷರಿಗೆ, ಪ್ರಕೃತಿ ಸವಿಯುವ ಮನಸ್ಸಿರಲಿಲ್ಲ. ಅವರೆಲ್ಲರೂ ತಮ್ಮ ರಜಾದಿನಗಳನ್ನು ಇಸ್ಪೀಟು, ಕುಡಿತಗಳಲ್ಲಿ ಕಳೆಯುವ ಮನಸ್ಕರಾಗಿದ್ದರು. ನಾವು ಹೆಂಗಸರು ಪ್ರತಿಯೊಂದು ನಿಮಿಷವನ್ನೂ ಪ್ರಕೃತಿಯನ್ನು ಸವಿಯುವದರಲ್ಲಿ ಮಗ್ನವಾಗಿದ್ದೆವು. ಬೆಟ್ಟಗುಡ್ಡಗಳ ತಿರುವಿನಲ್ಲಿ, ಡ್ರೈವರ್ ಪ್ರಯಾಣಿಕರನ್ನು ಬಸ್ಸಿನಿಂದ ಇಳಿಸಿ, ಬಸ್ ಅನ್ನು ಅಪಾಯದಿಂದ ಪಾರು ಮಾಡಲು ಹರಸಾಹಸ ಮಾಡುತ್ತಿದ್ದರೂ, ಇವರೆಲ್ಲಾ ಬಸ್ಸಿನಿಂದ ಕೆಳಗಿಳಿದರೂ, ಕೈಯ್ಯಲ್ಲಿ ಇಸ್ಪೀಟು ಎಲೆಗಳನ್ನು ಹಿಡಿದು ಆಟದಲ್ಲೇ ಮಗ್ನವಾಗಿದ್ದು ನೋಡಿ ನಮಗೆಲ್ಲಾ ಆಶ್ಚರ್ಯವಾಗಿತ್ತು.

ಜೋಗ್ ಅಥವಾ ಗೇರುಸೊಪ್ಪಿನ ಜಲಪಾತದ ಬಗ್ಗೆ ಹೇಳೋದಾದ್ರೆ ಪ್ರಪಂಚದ ಪ್ರಸಿದ್ಧ ಜಲಪಾತವನ್ನು ನೋಡುವ ತವಕ. ಇದು ಭಾರತದ ಪಶ್ಚಿಮ ಘಟ್ಟಗಳ ಸಾಲಿನಲ್ಲಿದೆ. ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲೂಕಿನ ಸಾಗರ ದಲ್ಲಿದೆ. ಸುಮಾರು 292 ಮೀ.ಎತ್ತರದಿಂದ ಭೋರ್ಗರೆಯುತ್ತಾ ಶರಾವತಿ ನದಿಯು ನಾಲ್ಕು ಸೀಳಾಗಿ ಧುಮುಕುತ್ತದೆ. ವೈಭವದಿಂದ ಅವ್ಯಾಹತವಾಗಿ ಧುಮುಕುವ ರಾಜ, ಜೋರಾಗಿ ಆರ್ಭಟಿಸುತ್ತಾ ಹಲವಾರು ಬಾರಿ ಚಿಮ್ಮುತ್ತಾ ಧುಮುಕುವ ರೋರರ್, ಬಳುಕುತ್ತಾ ಜಾರುವ ಲೇಡಿ, ಮತ್ತು ರಭಸದಿಂದ ಹಲವಾರು ಬಂಡೆಗಳ ಮೇಲೆ ಚಿಮ್ಮುತ್ತಾ ನುಗ್ಗುವ ರಾಕೆಟ್ ಈ ನಾಲ್ಕು ಜಲಭಾಗಗಳಾಗಿವೆ. ಇಲ್ಲಿ ಏಷ್ಯದಲ್ಲೇ ಅತಿ ಕಡಿಮೆ ವೆಚ್ಚದಲ್ಲಿ ಜಲವಿದ್ಯುಚ್ಛಕ್ತಿ ನಿರ್ಮಾಣವಾಗುತ್ತಿದೆ ಎನ್ನುವ ಪ್ರತೀತಿ ಉಂಟು. ಲಿಂಗನಮಕ್ಕಿ ಜಲಾಶಯದ ನಿರ್ಮಾಣದ ನಂತರ ಅದರ ಮೊದಲಿನ ವೈಭವ ಕಳೆದುಕೊಂಡಿದೆ ಎಂದು ಜನ ಅನ್ನುತ್ತಾರೆ. ಆಗ ಇನ್ನೂ ಎಳೇ ವಯಸ್ಸಾದ್ದರಿಂದ ಜಲಪಾತದ ಕಣಿವೆ ಉದ್ದಕ್ಕೂ ಉತ್ಸಾಹದಿಂದ ಇಳಿದು ಹೋಗಿದ್ದೆವು. ಅಲ್ಲಿ ಒಂದು ರಾತ್ರಿ ಉಳಿದು ಮಾರನೆದಿನ ಕೆಮ್ಮಣ್ಣು ಗುಂಡಿಗೆ ಹೋದೆವು.

ನನ್ನ ತಮ್ಮನಿಗೆ ಜೋಗ್‌ನಲ್ಲೇ ಕೆಲಸವಾದ್ದರಿಂದ ಎರಡು ಮೂರು ಸಲ ಹೋಗುವ ಅವಕಾಶ ಸಿಕ್ಕಿತು. ಶುದ್ಧ ಗಾಳಿ ಬೆಳಕು ಧಾರಾಳವಾಗಿ ಸಿಗುತ್ತಿದ್ದುದರಿಂದ, ಕಳ್ಳಕಾಕರ ಭಯವೂ ಇಲ್ಲದೆ ಬೆಳಗ್ಗೆ, ಸಾಯಂಕಾಲ ಹವಾ ಸೇವನೆಗೆ ಒಬ್ಬಳೇ ಹೊರಡುತ್ತಿದ್ದೆ. ಒಂದು ಸಲವಂತೂ ಹೆಗ್ಗೋಡಿನ ಸಾಂಸ್ಕೃತಿಕ ಶಿಬಿರದಿಂದ ಅಲ್ಲಿಗೆ ಹೋದರೆ, ತಮ್ಮನ ಮನೆ ಮುಂದೆಯೇ ಬೆಳಗ್ಗೆ 11 ಗಂಟೆ ಹೊತ್ತಿಗೆ ರಸ್ತೆಯುದ್ದಕ್ಕೂ ಒಂದು ನಾಗರ ಹಾವು ಬಿಸಿಲು ಕಾಯಿಸುತ್ತಾ ಮಲಗಿತ್ತು. ನನ್ನ ಜೊತೆಯಲ್ಲಿದ್ದ ವಿಜಯ ತಕ್ಷಣ ಕ್ಯಾಮೆರಾದೊಂದಿಗೆ ಕಾರಿನ ಬಾಗಿಲು ತೆರೆದು ಹೊರಬಿದ್ದಳು. ನನಗೋ ಭಯ ಡ್ರೈವರ್ ಹೇಳಿದ್ದು, 'ಮೇಡಮ್ ಹಾಗೇ, ಅವರಿಗೆ ಫೋಟೊ ಹುಚ್ಚು' ಅಂದ. ಸಧ್ಯ ಪುಣ್ಯಕ್ಕೆ ಹಾವು ಸರಸರ ಬೀದಿ ದಾಟಿ ಕಣ್ಮರೆಯಾದ್ದರಿಂದ ನಾವು ಬಚಾವಾದೆವು.

ಆಗ ನಡೆದ ಘಟನೆಗಳೆಲ್ಲವೂ ಸರಿಯಾಗಿ ನೆನಪಿಗೆ ಬಾರದಿದ್ದರೂ ಸ್ಥಳದ ದೃಶ್ಯಗಳು ಮಾತ್ರ ಮನಸ್ಸಿನಲ್ಲಿ ಬೇರೂರಿಬಿಟ್ಟಿದೆ. ಕ್ಷಮೆ ಇರಲಿ. ಹಾಗಾಗಿ ಇಲ್ಲಿ ನನ್ನ ಅನುಭವ ದಾಖಲಾಗಿಸಲಾಗಿಲ್ಲ. ಮುಂದಿನ ಸರಣಿಗಳಲ್ಲಿ ಸಾಧ್ಯವಾದಷ್ಟೂ ಕೊಡಲು ಪ್ರಯತ್ನಿಸುತ್ತೇನೆ.

# ಸರೋವರ



(ಉಮಾ ರಾವ್ ಕಥೆಗಳು)

ಪ್ರತಿದಿನ ಸಂಜೆಗತ್ತಲು ಸರೋವರವನ್ನು ಅಪ್ಪಿಕೊಳ್ಳುವ ಹೊತ್ತಿಗೆ. ಅವಳು ತಪ್ಪದೆ ಇಲ್ಲಿ ಬಂದು ಕೂಡುತ್ತಿದಳು. ಅದೇ ಸರೋವರ ಅದೇ ಜನ. ಅದೇ ಪಬ್. ಅದೇ ಮಿಣುಕು ದೀಪಗಳು, ತೂರಾಡುತ್ತಾ ಮನೆಗೆ ಮರಳುವ ದೋಣಿಗಳು.

✍ **ಉಮಾ ರಾವ್**

"ಅಮ್ಮಾ, ವಾಕ್ ಹೋಗಿ ಬಾ. ದಿನವೆಲ್ಲಾ ಮನೇಲಿ ಕೂತು ಬೇಜಾರಾಗಿರುತ್ತೆ..." ಎಂದು ಆಫೀಸಿನಿಂದ ಮನೆಗೆ ಮರಳಿದ ಮಗಳು ಹೇಳುವುದೇ ತಡ, ಇವಳು ಶೂ ಧರಿಸಿ ತಯಾರಾಗುತ್ತಿದ್ದಳು. ಮಗಳು, ಅಳಿಯ, ಅವರ ವರ್ಷದ ಮಗುವನ್ನು ಅವರ ಖಾಸಗಿ ಕಣಗಳಿಗೆ ಬಿಟ್ಟು ಸರೋವರದ ದಾರಿ ಹಿಡಿಯುತ್ತಿದ್ದಳು.

ದಿನಾ ಅವಳ ದಾರಿ ಕೂಡ ಒಂದೇ ಇರುತ್ತಿತ್ತು. ಸರೋವರದ ಸುತ್ತ ಜೀವ ತಳೆದಿದ್ದ ಈ ಊರಿನ ಯಾವ ರಸ್ತೆ ಹಿಡಿದು ಹೋದರೂ ಒಂದೇ. ಒಂದು ಪಕ್ಕ ಬೃಹತ್ ಮರಗಳ ನಡುವೆ ಅಡಗಿ ಕೂತ ಬಂಗಲೆಗಳು, ಇನ್ನೊಂದು ಪಕ್ಕ ನೀರಿನುದ್ದಕ್ಕೂ ನಿಂತ ಮುದ್ದಾದ ವಾಟರ್‌ಫ್ರಂಟ್ ಮನೆಗಳು. ಪ್ರತಿ ಮನೆ ಎದುರಿಗೂ ಮೈಮರೆತು ನೀರಿಗೆ ನುಗ್ಗದಂತೆ ಕಟ್ಟಿ ಹಾಕಿರುವರೋ ಎನ್ನಿಸುವ ದೋಣಿಗಳು. ಆಗಾಗ ಎದುರಾಗುವ ಕಾರುಗಳು. ಅದರಿಂದ ನಗುತ್ತಾ ಕೈ ಬೀಸುವ ಚಾಲಕರು, "ಅಮ್ಮಾ, ಇಲ್ಲಿ ಇನ್ನೂ ಚಿಕ್ಕ ಊರಿನ ಕಲ್ಚರ್ ಇದೆ. ಎದುರಿಗೆ ಸಿಕ್ಕವರೆಲ್ಲ ಗ್ರೀಟ್ ಮಾಡ್ತಾರೆ. ಅಮೆರಿಕಾದ ದೊಡ್ಡ ಊರುಗಳಲ್ಲಿ ಹಾಗಲ್ಲ" ಎಂದು ಮಗಳು ಹೇಳಿದಂತೆ.

ದಿನಾ ಸಂಜೆ ಕೆಂಪು ಬೈಸಿಕಲ್ ಮೇಲೆ ತಿರುಗುವ ಆ ಹತ್ತು ವರ್ಷದ ಹುಡುಗಿಯ ಭುಜದ ಮೇಲೊಂದು ಪುಟ್ಟ ಹಳದಿ ಹಕ್ಕಿ, ಅವಳ ಹಾರುವ ಹೊಂಗೂದಲ ನಡುವೆ ಅದು ಕಾಣುವುದೂ ಕಷ್ಟ, ಅದು ಆಟದ ಸಾಮಾನೆಂದೇ ಭ್ರಮಿಸಿದ್ದ ಅವಳಿಗೆ ಮೊದಲಬಾರಿ ಅದು ಕುಪ್ಪಳಿಸಿದ್ದು ಕಂಡಾಗ ಅಚ್ಚರಿಯಾಗಿತ್ತು. "ಅದಕ್ಕೆ ಬೈಕ್ ರೈಡ್ ತುಂಬಾ ಇಷ್ಟ. ಯಾವಾಗೂ ನಂಜೊತೇನೇ ಬರುತ್ತೆ, ಅದು ನನ್ನ ಪೆಟ್. ನನ್ನನ್ನು ಬಿಟ್ಟು ಎಂದೂ ಹಾರಿಹೋಗೊಲ್ಲ!" ಎಂದಿದ್ದಳು ಆ ಹುಡುಗಿ ಅದರ ಕತ್ತು ಸವರುತ್ತಾ.

ತಪ್ಪದೆ ಜಾಗಿಂಗ್ ಮಾಡುವ ಆ ಹೆಂಗಸಿನ ತೂಕ ಮುನ್ನೂರು ಪೌಂಡುಗಳಾದರೂ ಇರಬೇಕು. ಬಿಳೀ ತೋಳಿಲ್ಲದ ಟೀ ಶರಟು, ಕಪ್ಪು ಚೆಡ್ಡಿ. ಕಿವಿಯಲ್ಲಿ ವಾಕ್‌ಮನ್, ಏದುಸಿರಿಂದ ಕುಲುಕುತ್ತಿರುವ ಮೈ. "ಹಾಯ್" ಎಂದು ಓಡುತ್ತಲೇ ಕೈ ಬೀಸಿದಾಗ ಹೊರ ಚೆಲ್ಲುವ ಮಾಂಸಖಂಡಗಳು, ತಮಗೆ ಆರಾಮ ಎನಿಸಿದರೆ ಸಾಕು ನೋಡಿದವರೇನೆಂದರೇನು. ಇಲ್ಲಿಯವರು ತಮಗಿಂತ ಎಷ್ಟು ಭಿನ್ನ.

ಎರಡೂ ಕೈಯಲ್ಲಿ ಕೋಲು ಹಿಡಿದು ಸ್ಕೀ ಮಾಡುವವನಂತೆ ನಡೆದು ಹೋಗುವ ಮುದುಕ. ಅವನ ದೃಷ್ಟಿ ನೇರವಾಗಿ ತನ್ನ ಮುಂದಿನ ಹೆಜ್ಜೆ ಮೇಲೆ. ದಾರಿಯುದ್ದಕ್ಕೂ ತರಹ ತರಹದ ನಾಯಿಗಳನ್ನು ಹಿಡಿದು ಹೋಗುವ ಮಂದಿ. ಅವು ರಸ್ತೆ ಪಕ್ಕ "ಕೂತಾಗ" ಕುಪ್ಪೆ ಎತ್ತಿ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಮನೆಗೊಯ್ಯುವ ಕಾಯಕ! ರಸ್ತೆಯ ನಡುವೆ ನಿಂತು ಮಿಯಾವ್ ಎನ್ನುವ ಬಿಳೀ ಬೆಕ್ಕಿನ ಕತ್ತಿಗೆ ಕೆಂಪು ಪಟ್ಟಿ. ತನ್ನ ಸೈಕಲ್‌ಗಂಟಿದ ಗಾಡಿಯುಲ್ಲಿ ಅವಳಿ ಜವಳಿ ಮಕ್ಕಳನ್ನು ತಿರುಗಾಡಿಸುವ ತಂದೆ.



ತಿರುವಿನಲ್ಲಿದ್ದ ಆ ಹಳೇ ಮನೆ. ಬಣ್ಣ ಕಂಡು ವರ್ಷಗಳೇ ಆಗಿತ್ತು. ಕಂಪೌಂಡಿನ ತುಂಬಾ ಕಾಡು ಗಿಡ, ಪೊದೆ, ಹುಚ್ಚು ಹುಚ್ಚಾಗಿ ಬೆಳೆದ ಹುಲ್ಲು ಅದರ ನಡುವೆ ಮಸುಕಾಗಿ ಕಾಣುವ ಕಾಲುದಾರಿ. ಯಾವುದೋ ಬಳ್ಳಿಯಪ್ಪುಗೆಯಲ್ಲಿ ಹುಡುಗಿ ಹೋಗಿರುವ ಅಂಚೆಪೆಟ್ಟಿಗೆ. ಅದರ

ಮೇಲೆ ಉದುರಿ ಛಿದ್ರವಾಗಿರುವ ಮನೆ ಮಾಲೀಕನ ಹೆಸರು. ಅತ್ತ ತುಕ್ಕು ಹಿಡಿದು ನೆಲಕಚ್ಚಿರುವ ದೋಣಿ. ಇಂಥಾ ಸುಂದರ ಮನೆ ಹೀಗೆ ಕೇಳುವವರಿಲ್ಲದೆ ಬಿದ್ದಿದೆಯೇಕೆ? ತಣ್ಣನೆ ಕೂತಿರುವ ಗ್ರಿಲ್ ಎಂದಾದರೂ ಮತ್ತೆ ಸುಡುವ ಮಾಂಸದ ಪರಿಮಳ ಹರಡುವುದುಂಟೇ?

ಅದರ ಪಕ್ಕದ ಮನೆಯ ಬಾಗಿಲಿಗೆ ಸಿಕ್ಕಿಸಿದ ಕೆಂಪು ಬಿಳಿ ಅಮೆರಿಕಾ ಧ್ವಜ. ಮನೆ ಮುಂದಿನ ಬೃಹತ್ ಪೈನ್ ಮರಕ್ಕೆ ಕಟ್ಟಿದ ಹಳದಿ ರಿಬ್ಬನ್. ಇರಾಕ್ ಯುದ್ಧಭೂಮಿಗೆ ಹೋರಾಡಲು ಹೋದ ಮಗನಿಗಾಗಿ ಕಾಯುತ್ತಲೇ ಇರುವ ತಾಯಿ.

ದಾರಿಯಲ್ಲಿ ಸಿಗುವ ಮನೆಗಳಲ್ಲಿ ಅವಳನ್ನು ಹೆಚ್ಚು ಆಕರ್ಷಿಸಿದ್ದು ಆ ಕಂದು–ಬಿಳಿ ಬಣ್ಣದ ಬಂಗಲೆ, ವಿಶಾಲ ಹಸಿರು ಹಾಸಿನ ನಡುವೆ. ಹತ್ತಾರು ಮರಗಳಿಂದ ಸುತ್ತುವರಿದು ನಿಂತಿರುವ ಸೌಧ. ತನ್ನ ಬಾಲ್ಯದಲ್ಲಿ ಓದಿದ್ದ ಇಂಗ್ಲಿಷ್ ದಂತಕಥೆಗಳಲ್ಲಿ ಮೂಡಿಬರುತ್ತಿದ್ದಂಥಾ ಮನೆ. ಇವಳನ್ನು ಕಂಡ ಕೂಡಲೇ ಅದರಿಂದ ಬೊಗಳುತ್ತಲೇ ಹೆಸರಿನ ಪದಕ. ಪತಿ ಸಲ ಭಯವಾಗುತ್ತಿತ್ತು. ಆದರೆ ಅದೆಂದೂ ಇವಳ ತನಕ ಓ ಓಡಿಬರುತ್ತಿದ್ದ ಕುಳ್ಳ, ದೊಡ್ಡ ಕಿವಿಗಳ ಜೂಲುನಾಯಿ. ಕಂದು ಬಣ್ಣ, ಕತ್ತಿಗೆ ಲೋಹದ ಬರುತ್ತಿರಲಿಲ್ಲ. ಕಾಂಪೌಂಡಿಗೆ ಗೋಡೆ. ಬೇಲಿ. ಇಲ್ಲದಿದ್ದರೂ ಎಂದೂ ಹುಲ್ಲು ಹಾಸು ದಾಟಿ ರಸ್ತೆಗೆ ಇಳಿಯುತ್ತಿರಲಿಲ್ಲ. ಓಡಿಬಂದು ಅಲೆ ನಿಂತು ಜೋರಾಗಿ ಬೊಗಳುತ್ತಿತ್ತು! ತಾನು ರಸ್ತೆ ತಿರುವಿನಲ್ಲಿ ಕಣ್ಮರೆಯಾಗುವವರೆಗೂ. "ಅಮ್ಮಾ. ಇಲ್ಲಿ ಜನ ನಮ್ಮಂತೆ ಕಾಂಪೌಂಡಿಗೆ ಬೇಲಿ. ಗೋಡೆ ಹಾಕೋಕೆ ಇಷ್ಟಪಡೊಲ್ಲ. ನೋಡೋಕೆ ಅಂದವಾಗಿರೊಲ್ಲ ಅಂತಾರೆ. ಹಾಗಾಗಿ. ಇಲ್ಲಿ ನಾಯಿಗಳಿಗಾಗಿ 'ಇನ್‌ವಿಜಿಬಲ್ ಫೆನಸ್' ಇರುತ್ತವೆ. ಕಣ್ಣಿಗೆ ಕಾಣದೆ ನೆಲದ ಕೆಳಗೇ ಓಡುವ ತಂತಿಗಳು. ನಾಯಿಗಳು ಅದನ್ನು ದಾಟಲು ಹೋದರೆ ಸಣ್ಣ ಶಾಕ್ ಕೊಡುತ್ತದೆ. ಅವುಗಳಿಗೆ ಇದರ ಅರಿವು ಮೂಡಿಸಲು ಟ್ರೈನಿಂಗ್ ಕೊಟ್ಟಿರುವುದರಿಂದ, ಅವೆಂದೂ ಬೇಲಿ ದಾಟುವ ಪ್ರಯತ್ನವನ್ನೇ ಮಾಡುವು ದಿಲ್ಲ! ಅಮ್ಮಾ, ಅಮೆರಿಕಾದಲ್ಲಿ ಎವ್ರಿ ಪ್ರಾಬ್ಲಮ್ ಹ್ಯಾಸ್ ಎ ಸಲ್ಯೂಶನ್!" ಎಂದು ಮಗಳು ವಿವರಣೆ ಕೊಟ್ಟಿದ್ದಳು.

ಇದೆಲ್ಲದರ ನಡುವೆ ನಡೆಯುತ್ತಾ ಅವಳು ದೋಣಿ ನಿಲ್ದಾಣ ತಲುಪಿದ್ದಳು. ಹತ್ತಿರವೇ ಇದ್ದ ಮರದ ಬೆಂಚಿನ ಮೇಲೆ ಕೂಡುತ್ತಿದ್ದಳು. ಎದುರಿಗೇ ಇದ್ದ "ಬೇಟ್ ಶಾಪ್" ದಿನವೆಲ್ಲಾ ತೆರೆದಿರುತ್ತಿತ್ತು. ಅದರ ಕಿಟಕಿಗೆ ಹಚ್ಚಿದ ಓಪನ್ ಎಂಬ ನಿಯಾನ್ ಬೋರ್ಡು ಪಕಪಕ ಮಾಡುತ್ತಿತ್ತು. ಮೀನುಗಳನ್ನು ತಮ್ಮ ಕರಾಳ ಗಳಿಗೆಯತ್ತ ಆಕರ್ಷಿಸಲು ಎಷ್ಟೊಂದು ಉಪಾಯಗಳು. ದೊಡ್ಡ ಮೀನುಗಳಿಗಾಗಿ ಜೀವಂತವಾಗಿಯೇ ಇರುವ ಸಣ್ಣ ಹುಳುಗಳು. ಇಲ್ಲಿ ಮೀನು ಹಿಡಿಯುವವರ ಸಂತೆ. ಹೊರಗೆ ಕುರ್ಚಿಗಳ ಮೇಲೆ ಕೂತು ಕಾಫಿ ಕುಡಿಯುವವರು, ತಾವು ಇದುವರೆಗೂ ಹಿಡಿದ ದೊಡ್ಡ ದೊಡ್ಡ ಮೀನುಗಳ ಬಗ್ಗೆ ಜಂಭ ಕೊಚ್ಚುವವರು.

ಸರೋವರದ ಅಂಚಿನುದ್ದಕ್ಕೂ ಅದರಲ್ಲಿ ಪ್ರತಿಬಿಂಬಿಸುವ ಅಂದದ ಮನೆಗಳು ಇವುಗಳಲ್ಲಿ ಪೋಲೆಂಡಿನಿಂದ, ಇಟಲಿಯಿಂದ, ಜರ್ಮನಿಯಿಂದ, ಫ್ರಾನ್ಸಿನಿಂದ ಸ್ವೀಡನ್ನಿನಿಂದ ಬಂದು ಇಲ್ಲಿ ನೆಲೆಸಿದ ಜನ. ಹಿಂಸೆ ಕಿರುಕುಳ ತಪ್ಪಿಸಿಕೊಳ್ಳಲು ಓಡೀ ಬಂದವರು ಕೆಲವರಾದರೆ ಚಿನ್ನದ ಕನಸುಗಳನ್ನು ಹೊತ್ತು ಬಂದವರು ಹಲವರು. ನಾಜಿ ನರಕ ಅನುಭವಿಸಿದವರು. ತಂದೆ–ತಾಯಿಯರ ಸುಲಿದ ತೊಗಲು ಶೇಡ್‌ಗಳಾಗಿ ತೂಗು ಹಾಕಿದ ಚಿತ್ರಗಳನ್ನು ಪೇಪರಿನಲ್ಲಿ ಕಂಡವರು. ಎಂದೂ ಅಳಿಸದ ನಂಬರಿನ ಹಚ್ಚೆ ಇನ್ನೂ ಕೈಮೇಲೆ ಹೊತ್ತವರು. ಇಲ್ಲಿ ವಾಸಿಸುವ ವೃದ್ಧರ ಬಾಯಲ್ಲಿ ತೊದಲುತ್ತಾ ಬರುವ ಇಂಗ್ಲಿಷ್ ಭಾಷೆಗೆ ಇನ್ನೂ ತಮ್ಮ ಯುರೋಪಿಯನ್ ತಾಯ್ನು ಡಿಯ ಛಾಯೆ, ಎಲ್ಲೆಲ್ಲೂ ಬರೀ ಬಿಳಿ ಮುಖಗಳು.

"ಈ ನೇಬರ್ ಹುಡ್‌ನಲ್ಲಿ ಬರೀ ವೈಟ್ಸ್ ಇದ್ದಾರೆ. ಅದಕ್ಕೇ ಇಲ್ಲಿ ಮನೆಗಳು ತುಂಬಾ ದುಬಾರಿ. ತುಂಬಾ ಡೀಸೆಂಟ್, ಸೇಫ್ ಜಾಗ ಇದು. ನೋ ಬ್ಲ್ಯಾಕ್ಸ್ ಹಿಯರ್, ಅದಕ್ಕೆ, ಈಗಿನ ಕಾಲದಲ್ಲೂ ಎಷ್ಟೋ ಮನೆಗಳಿಗೆ ಬರ್ಗರ್ ಪ್ರೊಟೆಕ್ಷನ್ ಕೂಡ ಇಲ್ಲಾ ಗೊತ್ತಾ!?"

ಮಗಳ ಮಾತುಗಳಿಗೆ ಏನು ಜವಾಬು ಕೊಡಬೇಕೋ ತಿಳಿಯದೆ ಕಸಿವಿಸಿ.

ಪ್ರತಿದಿನ ಸಂಜೆಗತ್ತಲಿನಲ್ಲಿ ಎದುರಾಗುವ ಕಪ್ಪು ಜೋಡಿ, ದಿನಾ ಮೀನು ಹಿಡಿಯುತ್ತಾ ಸರೋವರ ಸುತ್ತುವ ಅರವತ್ತು ಮೀರಿದ ಗಂಡು–ಹೆಣ್ಣು. ಅವರು ಗಂಡ ಹೆಂಡತಿಯೇ, ಗೆಳೆಯರೇ, ಅಣ್ಣ ತಂಗಿಯರೇ. ಕದಲದೆ ನೀರಿನಮೇಲೆ ದೃಷ್ಟಿ, ಕೈಯಲ್ಲಿ ಗಾಳ, ಯಾರೊಡನೆಯೂ ಮಾತಿಲ್ಲ. ಪಕ್ಕದಲ್ಲೇ ಇಟ್ಟುಕೊಂಡ ಪ್ಲಾಸ್ಟಿಕ್ ಡಬ್ಬದಿಂದ ಪುಟ್ಟ ಮೀನುಗಳನ್ನು ಎಸೆಯುತ್ತಾ, ದೊಡ್ಡ ಮೀನುಗಳನ್ನು ಸೆಳೆಯುವ ಉಪಾಯ. ಆ ಬಿಳಿ ಮುಖಗಳ ಸಂತೆಯಲ್ಲಿ ಎರಡು ಕಪ್ಪು ಚುಕ್ಕಿಗಳು. ಇವರೇನು ಹೇಳ ಹೊರಟಿದ್ದಾರೆ?

ಹಾಗೇ ಒಂದು ದಿನ ಪರಿಚಯವಾದ ಆ ಪುಟ್ಟ ಹುಡುಗಿಯರು. ಇಬ್ಬರಿಗೂ ಸುಮಾರು ನಾಲ್ಕೈದು ವರ್ಷ ಇರಬಹುದು. ಒಂದು ಹೊಂಗೂದಲ ಅಚ್ಚ ಬಿಳಿಯ ಮಗುವಾದರೆ, ಇನ್ನೊಂದು ನಸುಕಂದು ಬಣ್ಣ. ಕಪ್ಪು ಕೂದಲಿನ ಉದ್ದ ಜಡೆ ಮಗು. ಭಾರತೀಯತೆಯ ಪಡಿಯಚ್ಚು. ಅದರ ಕೈಯಲ್ಲಿ ಯಾವಾಗಲೂ ಒಂದು ಗುಲಾಬಿ ಬಣ್ಣದ ಟೆಡ್ಡಿ ಬೇರ್, ಇವರನ್ನು ಕರೆತರುತ್ತಿದ್ದವಳು ಸುಮಾರು ಮೂವತ್ತು ವರ್ಷದ ಕೆಂಚಕೂದಲಿನ, ತೆಳುಮೈಕಟ್ಟಿನ ಚೆಲುವೆ, ತಾಯಿಯೇ ಇರಬೇಕು. ಒಂದು ಮಗು ದತ್ತು ತೆಗೆದುಕೊಂಡಿರಬೇಕು. ಇಲ್ಲಿ ಮಗಳಿದ್ದರೆ ಹೇಳುತ್ತಿದ್ದಳು. ಅಮ್ಮಾ ಇಲ್ಲಿ ಅಂಥ ಪರ್ಸನಲ್ ಪ್ರಶ್ನೆಗಳನ್ನು ಕೇಳೋಕೆ ಹೋಗಬೇಡ ಎಂದು. ಭಾರತದ ಯಾವ ಮೂಲೆಯಿಂದ ಈ ಸರೋವರ ತೀರಕ್ಕೆ ಬಂತು ಈ ಹುಡುಗಿ?

ಮುಂದುವರೆಯುವುದು.....

# ಪಿಕ್ ಪೊಕೆಟಿಂಗ್ ಅಥವಾ ಕಿಸೆಗಳ್ಳತನ

✍ ವಿಠ್ಠಲ ಕಟ್ಟಿ

ಪಿಕ್ ಪೊಕಟಿಂಗ್ ಈ ಶಬ್ದದ ಅನುಭವ ಎಲ್ಲರಿಗೂ ತಿಳಿದ ವಿಷಯವೇ. ಇದು ಹೆಚ್ಚಾಗಿ ಅತೀ ದೊಡ್ಡ ಶಹರಗಳಲ್ಲಿ ಕಂಡುಬರುವ ಸಹಜ ಸಂಗತಿ ಅನುಭವ ಆದಾಗ ತಾರ್ತಿಕ ಆಸ್ತಿರತೆ ಮತ್ತು ಅಧೋಗತಿ ಉಳಿದವರಿಗೆ ಎಚ್ಚರದ ಜಾಗೃತೆ, ಒಟ್ಟಿನಲ್ಲಿ ಇದೊಂದು ಬೇಡದ ಭೀತಿ.

ಈ ಭೀತಿ ನನ್ನನ್ನು ಸುಮಾರು ಐವತ್ತು ವರ್ಷಗಳಿಂದಲೆ ಕಾಡುತ್ತ ಬಂದಿದೆ. ಅದೇ ನನ್ನ ಪ್ರಥಮ ಪ್ರವೇಶ ದೇಶದ ವಾಣಿಜ್ಯ ರಾಜಧಾನಿ ಎನಿಸಿಕೊಂಡ ಮುಂಬಯಿ ನಗರದಲ್ಲಿ ಮಾಡಿದಾಗ ಇಸವಿ 1969ರ ಮಾತಿದು, ನನಗೆ ಭಾಭಾ ಪರಮಾಣು ಅಣುಸಂಧಾನ ಕೇಂದ್ರದಲ್ಲಿ ನೌಕರಿಗಾಗಿ ಸಂದರ್ಶನ ನೀಡುವ ಸಮಯ. ವಿಜ್ಞಾನದಲ್ಲಿ ಪದವೀಧರ ಇದ್ದದ್ದು ಆ ವಿಷಯದಲ್ಲಿ ಅಭಿರುಚಿಗಾಗಿ ಈ ಕೆಲಸ ನನ್ನನ್ನು ಆಕರ್ಷಿತು. ಅದಕ್ಕಾಗಿ ಈ ಬೃಹತ್ ಶಹರಗೆ ಹೋಗಿ ನನ್ನ ನಿರುದ್ಯೋಗಿತನಕ್ಕೆ ನಿವೃತ್ತಿ ಕೊಡಲು ಇಚ್ಛಿಸಿದೆ. ಅಲ್ಲದೆ ಈಗಾಗಲೆ ಅದೇ ಕಾರಣಕ್ಕಾಗಿ ಹುಬ್ಬಳ್ಳಿ ಬಿಟ್ಟು ಪುಣ್ಯನಗರಿ ಪುಣೆಗೆ ಬಂದಿದ್ದೆ. ಅಲ್ಲಿ ನನ್ನ ತಾತರು ಇದ್ದು ಇನ್ನು ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರು. ನಾನು ಮುಂಬಯಿಗೆ ಹೊಸಬ ಇದ್ದ ಕಾರಣ ಅವರು ನನ್ನನ್ನು ಕರೆದುಕೊಂಡು ಹೋಗಲು ಅನುವಾದರು.

ತಾತರ ಜೊತೆಗೆ ರೈಲಿನಲ್ಲಿ ಮುಂಬಯಿಗೆ ಹೊರಟೆ. ಈ ಮೊದಲು ಅವರು ಮುಂಬಯಿಯ ಭರಭರಾಟೆ ಜೀವನ, ಜನರ ಗದ್ದಲ, ಕುಂದುಕೊರತೆಗಳು ಇತ್ಯಾದಿಗಳ ಬಗ್ಗೆ, ಸಂಪೂರ್ಣ ಮಾಹಿತಿ ಕೊಟ್ಟಿದ್ದರು. ಲೋಕಲ್ ಇಲ್ಲವೆ ಬಸ್ಸುಗಳಲ್ಲಿ ಪಿಕ್ ಪೊಕೆಟ್ ಮಾಡುವ ಕಳ್ಳರು ಸಿಕ್ಕಾಗ ಪಬ್ಲಿಕ್ ಅವರಿಗೆ ಕೊಡುವ ನೇರ ಶಿಕ್ಷೆ ಹೇಗೆ ಕೊಡುತ್ತಾರೆಂಬುದನ್ನು ಚಿತ್ರಿಸಿದ್ದರು. ಪುಣೆ ರೇಲ್ವೆ ಸ್ಟೇಷನ್ನಲ್ಲಿರುವ ಗದ್ದಲವನ್ನು ನೋಡಿ ಮನಸ್ಸು ತಳಮಳಗೊಂಡಿತು. ನೌಕರಿಯ ಅಭಿಲಾಷೆ ಈ ಭೀತಿಯನ್ನು ಆಗಾಗ್ಗೆ ಹತ್ತಿಕ್ಕುತ್ತಿತ್ತು, ಆದರೂ ಅರಿವಿಲ್ಲದೆ ಅದು ಮುಖದಲ್ಲಿ ಎದ್ದು ಕಾಣುತ್ತಿತ್ತು. ರೈಲು ಬರುತ್ತಲೆ ಗದ್ದಲದ ಮೊದಲ ಚುರುಕು ಹತ್ತಿತ್ತು. ನಾವಿಬ್ಬರು ಹೇಗೆ ರೈಲಿನಲ್ಲಿ ಪ್ರವೇಶಿಸಿದೆವು. ಅವರ ವಯಸ್ಸು ನೋಡಿ ಕನಿಕರಿಸಿ ಅವರಿಗೆ ಒಬ್ಬ ಪ್ರವಾಸಿ ತನ್ನ ಆಸನವನ್ನು ಕೊಟ್ಟನು. ರೈಲು ಲೋನಾವಳ ಸ್ಟೇಷನ್ ಬಿಟ್ಟು ಸಹ್ಯಾದ್ರಿಯ ಗುಡ್ಡಗಳಲ್ಲಿ ಹಾವಿನಂತೆ ಹೋಗುವುದು ಮಧ್ಯದಲ್ಲಿ ಬರುವ ಸುರಂಗಗಳು, ಮತ್ತು ಶಿಖರ ಕೊಳ್ಳಗಳು ನನ್ನನ್ನು ಚಕಿತಗೊಳಿಸಿದವು. ಕರ್ಜತ್ ಸ್ಟೇಶನ್‌ನಿಂದ ಮುಂದೆ ಸಾಗಿದಾಗ ಮುಂಬಯಿಯ ಹೃದಯನಾಡಿಗಳಾದ ಲೋಕಲ್‌ಗಳ ಸಪ್ಪಳ ಮತ್ತು ಅದರಲ್ಲಿರುವ ಜನರ ನಿಬಿಡ ನನ್ನನ್ನು ಆಕರ್ಷಿಸಿದವು. ನಾನು ಇವರಂತೆ ಓಡಾಡುವ ದಿನಗಳು ಬರಬಹುದೆಂದು ಕನಸು ಕಂಡೆ. ಕಲ್ಯಾಣ್‌ದಲ್ಲಿ ಪ್ರವಾಸಿಗಳು ಇಳಿದಷ್ಟೇ ಜನರು ಮತ್ತೆ ಹತ್ತಿದ್ದರಿಂದ ರೈಲಿನಲ್ಲಿ ಜನಸಂದಣಿ ಅಷ್ಟೆ ಎನ್ನಬಹುದು. ಮುಂಬಯಿಯಲ್ಲಿ ನಮ್ಮ ನೆಂಟರ ಮನೆ ದಾದರದಲ್ಲಿತ್ತು. ದಾದರ ಸ್ಟೇಶನ್ ಬರುವ ಮುಂಚೆಯ ಪ್ರವಾಸಿಗಳ ಇಳಿಯುವಿಕೆಯ ಸಿದ್ದತೆ ಜೋರಾಯಿತು. ನಾನು ಮತ್ತು ತಾತ ಎಲ್ಲರಂತೆ ಗದ್ದಲದಲ್ಲಿ ಸೇರಿದೆವು. ನಾನು ಸಾಮಾನುಗಳ ಜೊತೆಗೆ ಮುಂದೆ ಸರಿಯುವಾಗ ನನ್ನ ಎಲ್ಲ ಲಕ್ಷ್ಯವನ್ನು ನನ್ನ ಜೇಬುಗಳಲ್ಲಿ ಕೇಂದ್ರೀಕರಿಸಿದೆ. ಪಿಕ್ ಪೊಕಟಿಂಗ್‌ದ ಭಯ ಇನ್ನು ಜೋರಾಯಿತು. ಅಷ್ಟರಲ್ಲಿ ಒಂದು ಎಂದು ಕಾಣದ ವಿಸ್ಮಯ ನನ್ನ ಜೇಬಿನಲ್ಲಿ ಒಂದು ಹೀರೊ ಫೌಂಟನ್ ಪೆನ್‌ದ ಪ್ರವೇಶ. ಮೈ ಜುಮ್ಮೆಂದಿತು, ಜೊತೆಗೆ ಗಾಬರಿಯ ಬೆವರು ಸೇರಿತು. ಕಾಲುಗಳಲ್ಲಿ ನಿಶ್ಯಕ್ತಿ ಮತ್ತು ನಿಶ್ಚಲನ ಹಿಂದಿನಿಂದ ಇತರ ಪ್ರವಾಸಿಗರ ಒತ್ತಡ ನನ್ನ ನಿಶ್ಚಲತೆಗೆ ಅವರಿಂದ ಬೈಗಳು ಯಾವುದನ್ನು ಉಸಿರಿಡಿಸುವ ಹಾಗಿಲ್ಲ. ಹಿಂದಿನ ಒತ್ತಡದಿಂದ ರೈಲಿನ ಬಾಗಿಲದಿಂದ ಇಳಿಯುವಾಗ ಕುಸಿದು ಬಿದ್ದ ತಾತರು ಕೂಡಲೇ ಬಂದು ನನ್ನನ್ನು ಎಬ್ಬಿಸಿದರು. ಏನಾಯಿತು ಎಂದು ಕೇಳಿದಾಗ ಬಾಯಿಂದ ಶಬ್ದಗಳು ಬರಲಿಲ್ಲ. ಸ್ವಲ್ಪ ವೇಳೆಯ ನಂತರ ಸುಧಾರಿಸಿಕೊಂಡು ನೆಂಟರ ಮನೆಯಲ್ಲಿ ಹೇಳುವೆ ಎಂದು ತಾತರಿಗೆ ಹೇಳಿದೆ. ನೆಂಟರ ಸಮ್ಮುಖದಲ್ಲಿ ತಾತರು ಮಧ್ಯಾಹ್ನದ ಸಂಗತಿಯನ್ನು ಹೇಳಿದಾಗ ನನ್ನ ಉತ್ತರಕ್ಕೆ ಎಲ್ಲರೂ ನಕ್ಕಿದ್ದೇನಕ್ಕಿದ್ದು, ಇವೆಲ್ಲ ಮುಂಬಯಿಯಲ್ಲಿ ಮಾಮೂಲು ಎಂದು ಹೇಳಿ, ನೆಂಟರು ನನ್ನನ್ನು ಸುಧಾರಿಸಿದರು.

ಇಸವಿ 1972ರ ಮಾತಿದು, ಬಹುಶಃ ಮಾರ್ಚ್ ತಿಂಗಳು ಇರಬಹುದು. ಆಗಿನ ಭಾರತದ ಕ್ರಿಕೆಟ್ ತಂಡವು ಕಪ್ತಾನ ಅಜಿತ್ ವಾಡೇಕರ ಅವರ ನೇತೃತ್ವದಲ್ಲಿ ವೆಷ್ಟ್ ಇಂಡೀಸ್ ಮತ್ತು ಇಂಗ್ಲೆಂಡ್ ದೇಶಗಳನ್ನು ಪ್ರವಾಶಿಸಿ, ವಿದೇಶ ನೆಲದಲ್ಲಿ ಟೆಸ್ಟ್ ಸರಣಿಗಳನ್ನು ಪ್ರಥಮವಾಗಿ ಗೆದ್ದು, ಕ್ರಿಕೆಟ್ ಇತಿಹಾಸದಲ್ಲಿ ಸುವರ್ಣ ಲಿಪಿಯನ್ನು ಬರೆಯಿತು.

ಈ ಸಾಧನೆ ಗೈದ ಎಲ್ಲ ಆಟಗಾರರನ್ನು ಸತ್ಕರಿಸುವ ಸಮಾರಂಭವನ್ನು BCCI ಆಯೋಜಿಸಿತ್ತು. ಚರ್ಚ್‌ಗೇಟ್ ಸ್ಟೇಶನ್ನಿನ ಪಕ್ಕದಲ್ಲಿರುವ CCI ದ ಬ್ರೆಬೋರ್ನ ಸ್ಟೇಡಿಯಮ್‌ದಲ್ಲಿ ಸಂಜೆ 5 ಗಂಟೆಗೆ ಸಮಾರಂಭ ಇದೆ ಎಂದು ದಿನ ಪತ್ರಿಕೆಗಳಲ್ಲಿ ಪ್ರಕಟಿಸಿ ಸಾಮಾನ್ಯ ಪಬ್ಲಿಕನ್ನು ಆಮಂತ್ರಿಸಲಾಗಿತ್ತು. ಆ ವಿಜಯಿ ಆಟಗಾರರ ಮುಖ ದರ್ಶನ ಪಡೆಯುವ ಮನಾಭಿಲಾಷೆ ಇತ್ತು. ಅಂತಲೆ ಅಂದು ಆಫೀಸಿನಲ್ಲಿ ಹೇಳಿಕೊಂಡು ಸಂಜೆ 5 ಗಂಟೆಯ ಸುಮಾರಿಗೆ ಸ್ಟೇಡಿಯಮ್ ತಲುಪಿದೆ. ಸ್ಟೇಡಿಯಮ್ ಕಿಕ್ಕಿರಿದ ಪ್ರೋತ್ಸಾಹಕರಿಂದ ತುಂಬಿತ್ತು. "ಭಾರತ ಕ್ರಿಕೆಟ್ ಟೀಮ್ ಯಾಚಾ ವಿಜಯ ಹೂ' ಮತ್ತು 'ಸರ್ವ ಮುಂಬಯಿಕರಲಾ ವಾಡೇಕರವರ ಗರ್ವ ಅಹ' ಎಂಬ ವಿಜಯೋದ್ಘಾನಗಳು ಪ್ರತಿ ನಿಮಿಷಕ್ಕೂ ಆಕಾಶವನ್ನು ಸೇರುತ್ತಿದ್ದವು ಎಲ್ಲ ಅಭಿಮಾನಿಗಳ ಆನಂದಕ್ಕೆ ಮುಗಿಲೇ ಕೊನೆ, ಕಾರ್ಯಕ್ರಮ ಮುಗಿದು ಸ್ಟೇಡಿಯಮ್‌ನ ಹೊರ ದ್ವಾರಗಳಿಂದ ಹೋಗುವಾಗ ಜನರ ನೂಕುನುಗ್ಗಲು, ಹೇಗೊ ದಾಟಿ ನಾನು ರಸ್ತೆಗೆ ಬಂದೆ. ಅಚ್ಚರಿ ಕಾದಿತ್ತು. ಪ್ಯಾಂಟ್ ಜೇಬಿಗೆ ರೇಜರ್ ಬೇಡಿನಿಂದ ಕತ್ತರಿ, ಆಫೀಸಿನ ಗುರುತು ಕಾರ್ಡಿನೊಂದಿಗೆ ನೋಟುಗಳ ನಾಪತ್ತೆ ಎದೆ ಧಸೆಂದಿತು. ಇನ್ನೊಂದು ಜೇಬಿನಲ್ಲಿರುವ 2 ರೂಪಾಯಿಯ ನೋಟು ಅಂದಿನ ಅಸ್ಥಿರತೆಯ

ಗಾಬರಿಗೆ ಸ್ವಲ್ಪ ಸಮಾಧಾನ. ಊಟ ಇಲ್ಲದೆ ಒಂದು ಪ್ಲೇಟ್ ಇಡ್ಲಿ–ಚಟ್ನಿಯಲ್ಲಿಯ ತೃಪ್ತಿ ಕಂಡ ನಂತರ ಲೋಕಲ್ ಹಿಡಿದು ಸಾಯನ್ ಕೋಳಿವಾಡಾದ ರೂಮಿಗೆ ಮರಳಿದೆ. ಅನುಭವ ಹಂಚಿಕೊಂಡಾಗ ಎಲ್ಲರ ಉತ್ತರ "Who asked you to attend such a rowdy crowdy function?"

ಮದುವೆಯ ನಂತರ ಬ್ರಹ್ಮಚಾರಿಗಳಿಗಿರುವ ಸ್ವತಂತ್ರ ಪುಚ್ಛಗಳಿಗೆ ಕೊಕ್ಕು ತಿರುಗಾಡುವದು ಅಷ್ಟಕ್ಕಷ್ಟೆ ಆತ್ಮರಲ್ಲಿ ಮಗು ಆದರೆ ಓಡಾಟಕ್ಕೆ ಪೂರ್ಣ ವಿರಾಮ. ಸಂಸಾರಿಕ ತಾಪತ್ರಯಗಳಿಗೆ ಆದ್ಯತೆ. ಅಲ್ಲಿಯೇ ಆನಂದ ಪಡೆಯಬೇಕು. ಡೊಂಬಿವಿಲಿಯಲ್ಲಿ ಮನೆ ಮಾಡಿ ಮೂರು ವರ್ಷಗಳು ಸಂದಿದ್ದವು. ಎರಡಿದ್ದ ನಾವು ಮೂರಾಗಿದ್ದೆವು. ಆಗ ನನಗೆ ಆಫೀಸಿಗೆ ತಿಂಗಳದ 2ನೆ ಮತ್ತು 4ನೆ ಶನಿವಾರಗಳಂದು ರಜೆ. ಆದರೆ ದೇವನಾರದ ಅಣುಶಕ್ತಿನಗರದಲ್ಲಿರುವ ನಮ್ಮ ಆಸ್ಪತ್ರೆಗೆ ಅರ್ಧ ದಿನದ ಕೆಲಸ ಇತ್ತು. ಈ ಮೊದಲೆ ಭೇಟಿಯ ಸಮಯವನ್ನು ಸಾಧಿಸಿ ದೂರದ ಅಣುಶಕ್ತಿನಗರದಲ್ಲಿರುವ ಆಸ್ಪತ್ರೆಯ ಚಿಕ್ಕ ಮಕ್ಕಳ ವಿಭಾಗದಲ್ಲಿ ನಮ್ಮ ಒಂದು ವರ್ಷದ ಮಗುವನ್ನು ತೋರಿಸಿ, ಕೆಲಸ ಮುಗಿಸುವುದರಲ್ಲಿ ಮಧ್ಯಾಹ್ನದ 2 ಗಂಟೆ ಆಯಿತು. ಅಲ್ಲಿಂದ ಬಸ್ಸು ಹಿಡಿದು ಸಾಯನ್‌ಗೆ ಬರುವುದರೊಳಗೆ ಗಂಟೆ 2.45. ಶನಿವಾರದ ಅರ್ಧ ದಿನದ ಕಲಸ ಮುಗಿಸಿಕೊಂಡು ಮನೆಗೆ ತೆರಳುವ ಜನರ ನಿಬಿಡ ಶುರು ಆಗಿತ್ತು. ಕೈಯಲ್ಲಿ ಮಗು ಇದೆ ಎಂದು ಭಾರೀ ಗದ್ದಲ ಇರುವ ಎರಡು ಲೋಕಲ್ ಗಾಡಿಗಳನ್ನು ಬಿಟ್ಟುಬಿಟ್ರೆ, ಕೊನೆಗೆ ತೀರ್ಮಾನಿಸಿ ಕಡಿಮೆ ಗದ್ದಲ ಇರುವ ಗಾಡಿಯಲ್ಲಿ ಹತ್ತಿದೆ. ಆದರೆ ಮುಂದಿನ ಕುರ್ಲಾ ಸ್ಟೇಶನ್‌ದಲ್ಲಿ ಜನರ ವಿಪರೀತ ತುಕ್ಕಾ ಬುಕ್ಕಿ ಆಯಿತು. ಮಗುವನ್ನು ಕಾಪಾಡುವುದರಲ್ಲಿ ಮನಸ್ಸೆಲ್ಲಾ ಕೇಂದ್ರೀಕರಣ, ಥಾನ ಊರು ಬಂದಾಗ ಗದ್ದಲ ಕಡಿಮೆಯಾಗಿ ಉಸಿರಾಡಿಸುವಂತಾಯಿತು. ಮತ್ತು ದಯೆ ತೋರಿದ ಒಬ್ಬ ಪ್ರಯಾಣಿಕನಿಂದ ಕೂರಲು ಅವಕಾಶವಾಯಿತು. ಕೈ ಪ್ಯಾಂಟಿನ ಕಿಸೆಯ ಕಡೆಗೆ ಸರಿಸಿದಾಗ ಒಮ್ಮೆಲೆ ಆಘಾತ. ಹಣ ಮತ್ತು ಗುರ್ತು ಕಾರ್ಡುಗಳ ಮಟ್ಟಮಾಯ. 'ಈ ಪಿಕ್ ಪೊಕೆಟಿಂಗ್‌ಗೆ ಕೊನೆ ಇಲ್ಲವೆ, ಅಯ್ಯೋ ಇದಾವ ಮುಂಬಯಿ ಬರಡು ಜೀವನ' ಎಂದೆನಿಸಿ ವ್ಯಥೆಪಟ್ಟೆ. ಅಂದಿನಿಂದ ನನ್ನ ಎಲ್ಲ ಪ್ಯಾಂಟುಗಳಲ್ಲಿ ಚೋರ ಪಾಕೀಟ (ಕಿಸೆ)ನ್ನು ಲಗತ್ತಿಸುತ್ತಲೇ ಇದ್ದೇನೆ. ಇದು ಎಲ್ಲ ಸರ್ವೆ ಸಾಮಾನ್ಯ ಮುಂಬಯಿ ಜೀವಿಗಳ ಲಕ್ಷಣ. ಅಂದರೆ ಯಾರ ಪ್ಯಾಂಟಿಗೆ ಚೋರಕಿಸೆ ಇದ್ದರೆ, ಅವನು ಮುಂಬಯಿಕರ ಇನ್ನೊಂದು ಅನುಭವ ತಿಳಿಯಲು ಅರ್ಹವಾಗಿದೆ. ನಿನ್ನ ಆಫೀಸಿಗೆ ಹೋಗಲು ನನ್ನ ಪ್ರವಾಸ ಎರಡು ಹಂತಗಳಲ್ಲಿ ಇತ್ತು. ಡೊಂಬಿವಿಲಿಯಿಂದ ಘಾಟ್‌ಕೋಪರದ ವರೆಗೆ ಲೋಕಲ್‌ದಿಂದ ನಂತರ ಘಾಟ್‌ಕೋಪರದಿಂದ ಟೊಂಬೆಯವರೆಗೆ ಆಫೀಸಿನ ಬಸ್ಸಿನಿಂದ. ಬೆಳಗಿನ 8:37ರ ಕರ್ಜತ್ ವಿಟಿ ಡಬಲ್ ಫಾಸ್ಟ್ ಲೋಕಲ್ ಹಿಡಿದು ಘಾಟ್‌ಕೋಪರ್ ಸ್ಟೇಶನ್ನಿನಲ್ಲಿ ಗಾಡಿ ನಿಲ್ಲುವ ಪೂರ್ವದಲ್ಲಿಯೆ ನಿಂತ ಜನರ ಮೇಲೆ ಜಿಗಿಯುವುದು ದಿನನಿತ್ಯದ ವೈವಾಟ. ಅಂದೊಂದಿನ ಯಥಾಪ್ರಕಾರವಾಗಿ 8.37ರ ಡಬಲ್ ಫಾಸ್ಟ್ ಲೋಕಲ್ ಹಿಡಿದೆ. ಜನರ ತಿಕ್ಕಾ ಬುಕ್ಕಿ ಮಾಮೂಲು ಥಾನ ಸ್ಟೇಶನ್ ಬರುತ್ತಲೇ '**ಚೋರ್ ಚೋರ್**' ಎಂದು ಒಬ್ಬ ನಿಂತ ಪ್ರವಾಸಿಯ ಚೀರಾಟ. ಹತ್ತಿರದ ಇನ್ನೊಬ್ಬ ಪ್ರವಾಸಿ ಆ ಪಿಕ್ ಪೊಕಟಿಂಗ್ ಮಾಡುವ ಕಿಸೆಗಳ್ಳನನ್ನು ತತ್‌ಕ್ಷಣದಲ್ಲಿ ಬಂಧಿಸಿದ. ಎಲ್ಲ ಪ್ರವಾಸಿಗಳ ಒಂದೇ ಮತ 'ಮಾರೋ ಸಾಲೆಕೊ' ಹೀಗೆ ಎಲ್ಲರು ಅಂದಿನ ದುರ್ದೆಶ ಹೊಂದಿದ ಕಿಶೆಗಳನನ್ನು ಥಳಿಸಿದ್ದೇ ಥಳಿಸಿದ್ದು, ನನ್ನ ಎಲ್ಲ ಹಳೆಯ ಸಿಟ್ಟನ್ನು ಜ್ಞಾಪಿಸಿ ನಾನು ಒಂದು ಅವನಿಗೆ ಬಾರಿಸಿದೆ. ಅವನ ದುಸ್ಸಾಹಸಕ್ಕೆ ಜನರಿಂದಲೆ ನ್ಯಾಯ ದೊರಕಿತು. ಅದರ ಇನ್ನು ಕಥೆ ಮುಗಿದಿಲ್ಲ ಥಾನೆಯಿಂದ ಲೋಕಲ್ ಘಾಟ್‌ಕೋಪರ್ ಸ್ಟೇಶನ್ ಮುಟ್ಟುವಾಗ ಮಂದ ಚಲನೆ ಇದ್ದಾಗಲೇ ಆ ಕಿಸೆಗಳ್ಳನನ್ನು ಗಾಡಿಯಿಂದ ಹೊರಗೆ ತಬ್ಬಿದರು. ಇದು ಕ್ರೂರ ಕಾರ್ಯ. ಆದರೆ ಇದು ಇತರ ಕಿಸೆಗಳ್ಳರಿಗೆ ಪಾಠ ಕಲಿಸುವಂತಿದೆ. ಅವರು ಪಾಠ ಕಲಿಯುವರೆ? ಇದೊಂದು ದೊಡ್ಡ ಸವಾಲು.

ಈಗಿದ್ದ ಕೊರೊನಾ ಮತ್ತೊಂದು ಸಾಮಾಜಿಕ ಹಾವಳಿಯನ್ನು ತಂದಿದೆ. ಲಾಕ್ ಡೌನ್‌ಗಳ ಅವಾಂತರದಿಂದ ಧಾರ್ಮಿಕ ಕೇಂದ್ರಗಳಾದ ಮಂದಿರಗಳು, ಮಸೀದಿಗಳು ಮತ್ತು ಚರ್ಚ್‌ಗಳು ಬಂದ್ ಆಗಿರುವುದರಿಂದ ಭಕ್ತರ ಹೋಗುವಿಕೆ ನಿಂತಿದೆ. ಅಧಿಕ ಭಕ್ತರನ್ನು ಆಕರ್ಷಿಸುವ ಮುಂಬಯಿಯ ಪ್ರತಿ ಮಂಗಳವಾರದಂದು ಪ್ರಭಾದೇವಿಯ, ಸಿದ್ಧಿವಿನಾಯಕ ಮಂದಿರ, ಪ್ರತಿ ಬುಧವಾರದಂದು ಮಾಹೀಮದ ಚರ್ಚ್, ಪ್ರತಿ ಶುಕ್ರವಾರರಂದು ಹಾಜಿಅಲಿ ಮಸೀದಿಗಳಿಗೆ ಈಗ ಬೀಗ ಹಾಕಲಾಗಿದೆ. ಭಕ್ತರ ಚಪ್ಪಲಿಗಳನ್ನು ಕದ್ದು ಮಾರಿ ತಮ್ಮ ಜೀವನವನ್ನು ಸಾಗಿಸುವ ಕಳ್ಳರಿಗೆ ಜೀವನೋಪಾಯ ಕಷ್ಟವಾಗಿದೆ. ಈ ಪ್ರಶ್ನೆಗೆ ಉತ್ತರವನ್ನು ಶೋಧಿಸಬೇಕಲ್ಲವೆ. ಉತ್ತರ ಇಲ್ಲಿದೆ ನೋಡಿ. ಈ ಚಪ್ಪಲಿಗಳ್ಳರು ಹೊಸ ಉಪಾಯ ಕಂಡಿದ್ದಾರೆ ಮುಂಬಯಿಯಲ್ಲಿ ಸಾಮಾನ್ಯವಾಗಿ ತಮ್ಮ ಫ್ಲ್ಯಾಟಿನ ಮುಖ್ಯದ್ವಾರದ ಹೊರಗೆ ಚಪ್ಪಲಿಗಳನ್ನು ಇಡುವ ವಾಡಿಕೆ ಇದೆ. ಈ ಕಳ್ಳರು ಮಧಾಹ್ನದ ನಿಶ್ಚಲನ ವೇಳೆಯಲ್ಲಿ ಸೊಸೈಟಿ ಕಟ್ಟಡಗಳಲ್ಲಿ ಪ್ರವೇಶಿಸಿ, ಉತ್ತಮ ಚಪ್ಪಲಿಗಳು ಇಲ್ಲವೆ ಬೂಟುಗಳನ್ನು ಲಪಟಾಯಿಸುವ ಸಮಾಚಾರವನ್ನು ಮೊನ್ನೆ ಪೇಪರಿನಲ್ಲಿ ಓದಿ ದಿಗ್ಭ್ರಮೆಗೊಂಡ ಇವರ ಈ ಚುರುಕು ಬುದ್ದಿಗೆ ತಲೆದೂಗಿದೆ. ಆದರೆ ಇದೆ ಬುದ್ದಿಯನ್ನು ಒಳ್ಳೆಯ ಕಾರ್ಯದಲ್ಲಿ ಉಪಯೋಗಿಸಿದರೆ ನಮ್ಮೂರು ಮುಂಬಯಿ ಇನ್ನಷ್ಟೂ ಹೆಸರು ಸಾಧಿಸುತ್ತಿತ್ತು.

ನನ್ನ ಈ ಐದು ದಶಕಗಳ ಜೀವನದಲ್ಲಿ ಮುಂಬಯಿ ನನಗೆ ಅನೇಕ ಅನುಭವಗಳನ್ನು ತಿಳಿಸಿ ಕೊಟ್ಟಿದೆ. ಇಲ್ಲಿಯ ಸಾಮಾನ್ಯ ಜನರ ತಾಳ್ಮೆ, ಸಹ ಜೀವನ, ಪರಸ್ಪರ ಸಹಕಾರ, ಎಂಥಾ ಆಲಸಿಯನ್ನು ಚುರುಕಾಗಿ ಮಾಡುವ ಝಟ್ ಪಟ್ ಜೀವನ ಶೈಲಿ ಮತ್ತು ಸದಾ ಎದ್ದಿರುವ ಮುಂಬಯಿ ನಗರ ಭಾರತದ ನಕ್ಷೆಯಲ್ಲಿ ತನ್ನದೆ ಆದ ಸ್ಥಾನ ಮತ್ತು ಗೌರವವನ್ನು ಕಾಯ್ದುಕೊಂಡಿದೆ. ಇಂತಹ ಗೌರವಾನ್ವಿತ ಮುಂಬಯಿ ನಗರದ ಸುಂದರ ಮುಖದಲ್ಲಿ ಈ ಪಿಕ್ ಪೊಕೆಟಿಂಗ್ ಕಪ್ಪು ಕಲೆ ಅಲ್ಲವೆ? ಇದನ್ನು ಅಳಿಸುವರು ನಾವು ಮುಂಬಯಿವರಲ್ಲವೆ?

# ಕೆಲವರು 'ಓಂ' ಇಲ್ಲದೆ ನಮ ಶಿವಾಯ ಎಂದು ಏಕೆ ಹೇಳುತ್ತಾರೆ?

✍ ರಿಯಾ ಕುಮಾರಿ

ನಾವು ಮಂತ್ರವನ್ನು ಶಬ್ದವಾಗಿ ಪಠಿಸುತ್ತಿದ್ದೇವೆಯೇ ಅಥವಾ ಅದನ್ನು ಒಂದು ಮಾರ್ಗವಾಗಿ ಬದುಕುತ್ತಿದ್ದೇವೆಯೇ? ಇನ್ನೂ ಆಶ್ಚರ್ಯಕರ ಸಂಗತಿಯೆಂದರೆ, ಕೆಲವು ಹಳೆಯ ಶೈವ ಗ್ರಂಥಗಳಲ್ಲಿ, ಮಂತ್ರವು "ಓಂ" ನಿಂದ ಪ್ರಾರಂಭವಾಗುವುದಿಲ್ಲ ಎಂದು ನಿಮಗೆ ತಿಳಿದಿದೆಯೇ? ಅದು ಸರಿ. ನಿಜವಾದ ಶಕ್ತಿಕೇಂದ್ರ, ಶೈವ ಧರ್ಮದ ಆಳವಾದ ಪದರಗಳಲ್ಲಿ ರವಾನಿಸಲ್ಪಟ್ಟದ್ದು, ಕೇವಲ ಐದು ಅಕ್ಷರಗಳು: ನ – ಮ – ಶಿ – ವಾ – ಯ. ಪೂರ್ವಪ್ರತ್ಯಯವಿಲ್ಲ. ಪ್ರವರ್ಧಮಾನವಿಲ್ಲ. "ಓಂ" ಇಲ್ಲ. ಮತ್ತು ನೀವು ಏಕೆ ಎಂದು ಅರ್ಥಮಾಡಿಕೊಂಡ ನಂತರ, ನೀವು ಏಕೆ ಎಂದು ಭಾವಿಸಿದ ನಂತರ, ನೀವು ಮತ್ತೆ ಎಂದಿಗೂ ಅದೇ ರೀತಿ ಜಪಿಸಬಾರದು.

'ನಾಮ ಶಿವಾಯ'ದ ನಿಜವಾದ ಅರ್ಥವೇನು?

ಐದು ಅಕ್ಷರಗಳು ಭೂಮಿ, ನೀರು, ಬೆಂಕಿ, ಗಾಳಿ, ಬಾಹ್ಯಾಕಾಶವನ್ನು ಪ್ರತಿನಿಧಿಸುತ್ತವೆ. ಸ್ಪಷ್ಟವಾಗಿ ಹೇಳೋಣ: ಇದು ಶಬ್ದಾರ್ಥದ ಬಗ್ಗೆ ಅಲ್ಲ. ಇದು ದಿಕ್ಕಿನ ಬಗ್ಗೆ. ಏಕೆಂದರೆ ಓಂ ಎಂಬುದು ಸೃಷ್ಟಿಯಿಂದ ಸಂರಕ್ಷಣೆಯಿಂದ ವಿಸರ್ಜನೆಯವರೆಗೆ ಅಸ್ತಿತ್ವದ ಸಂಪೂರ್ಣತೆಯನ್ನು ಪ್ರತಿನಿಧಿಸುವ ಕಾಸ್ಮಿಕ್ ಕಂಪನವಾಗಿದ್ದರೂ, ನಮ ಶಿವಾಯವು ಶಿವನಿಗೆ ಸ್ವಯಂನ ನೇರ ಅರ್ಪಣೆಯಾಗಿದೆ.

ನ – ಭೂಮಿ (ಪೃಥ್ವಿ), ಮ – ನೀರು (ಜಲ), ಶಿ – ಬೆಂಕಿ (ಅಗ್ನಿ), ವಾ – ಗಾಳಿ (ವಾಯು), ಯ – ಬಾಹ್ಯಾಕಾಶ (ಆಕಾಶ)

ಒಟ್ಟಿಗೆ, ಈ ಐದು ಉಚ್ಚಾರಾಂಶಗಳು ಕೇವಲ ಅಂಶಗಳನ್ನು ಹೆಸರಿಸುವುದಿಲ್ಲ. ಅವು ನಿಮ್ಮನ್ನು, ನಿಮ್ಮ ದೇಹವನ್ನು, ನಿಮ್ಮ ಉಸಿರನ್ನು, ನಿಮ್ಮ ಮನಸ್ಸನ್ನು, ನಿಮ್ಮ ರೂಪವನ್ನು, ನಿಮ್ಮ ಸಾರವನ್ನು ನಕ್ಷೆ ಮಾಡುತ್ತವೆ. ನೀವು ನಾಮ ಶಿವಾಯವನ್ನು ಜಪಿಸುವಾಗ, ನೀವು ಆಶೀರ್ವಾದಗಳನ್ನು ಕೇಳುತ್ತಿಲ್ಲ. ನೀವು ನಿಮ್ಮೆಲ್ಲರನ್ನೂ ಶರಣಾಗುತ್ತಿದ್ದೀರಿ, ಅದನ್ನು ಸೃಷ್ಟಿಸಿದ ಮೂಲಕ್ಕೆ ಹಿಂತಿರುಗಿ.ಇದು ದೂರದಿಂದ ಪೂಜೆಯಲ್ಲ. ಇದು ಅನಂತತೆಯಲ್ಲಿ ಕರಗುವ ಗುರುತು. 'ಓಂ', ಪೂಜಿಸಲಾಗುತ್ತದೆ, ಆದರೆ ಯಾವಾಗಲೂ ಅಗತ್ಯವಿಲ್ಲ. ಓಂ ಸೃಷ್ಟಿ, ಶಿವ ನಂತರ ಉಳಿಯುವುದು. ಓಂ ಸೃಷ್ಟಿ, ಶಿವ ನಂತರ ಉಳಿಯುವುದು.

"ಓಂ ನಮಃ ಶಿವಾಯ" ಎಂಬುದು ಸಂಪೂರ್ಣ ಧ್ವನಿಸುತ್ತದೆ. ಕಾವ್ಯಾತ್ಮಕ. ಪೂಜ್ಯ. ಮತ್ತು ಅನೇಕ ಭಕ್ತಿ ಸಂಪ್ರದಾಯಗಳಲ್ಲಿ, ವಿಶೇಷವಾಗಿ ಭಕ್ತಿಯಲ್ಲಿ, ಅದನ್ನು ಪೂರ್ಣ ಪ್ರಾಮಾಣಿಕತೆಯಿಂದ ಆ ರೀತಿಯಲ್ಲಿ ಪಠಿಸಲಾಗುತ್ತದೆ. ಅದರಲ್ಲಿ ಯಾವುದೇ ತಪ್ಪಿಲ್ಲ. ಕೆಲವು ಶೈವ ಸಂಪ್ರದಾಯಗಳಲ್ಲಿ, ವಿಶೇಷವಾಗಿ ಆಗಮಿಕ್ ಮತ್ತು ಸಿದ್ಧಾಂತ ಶಾಲೆಗಳಲ್ಲಿ, 'ಓಂ' ಅನ್ನು ಮೂಲ ಮಂತ್ರವಾದ ನಮಃ ಶಿವಾಯಕ್ಕೆ ಐಚ್ಛಿಕ ಅಥವಾ ದ್ವಿತೀಯಕವೆಂದು ಪರಿಗಣಿಸಲಾಗುತ್ತದೆ. ವಿಶೇಷವಾಗಿ ಶೈವ ಸಿದ್ಧಾಂತದಂತಹ ರುದ್ರ-ಕೇಂದ್ರಿತ ಸಂಪ್ರದಾಯಗಳಲ್ಲಿ, ಶಕ್ತಿಯು ಮೂಲ ಐದು ಅಕ್ಷರಗಳಲ್ಲಿದೆ. ಅವುಗಳಿಗೆ ಪದರಗಳನ್ನು ಸೇರಿಸುವುದರಲ್ಲಿ ಅಲ್ಲ.

ಏಕೆ? ಏಕೆಂದರೆ ಓಂ ಸೃಷ್ಟಿಯ ಶಬ್ದ. ಆದರೆ ಶಿವ ಸೃಷ್ಟಿಯಲ್ಲ. ಅದರ ನಂತರ ಉಳಿಯುವುದು ಶಿವ. ಅವನು ಶಬ್ದದ ನಂತ ವಿಘಟನೆಯ ಉದ್ದೇಶ. ಲಾಭ ಪಡೆಯಲು ಜಪಿಸಬೇಡಿ, ಬಿಟ್ಟು ಬಿಡಲು ಜಪಿಸಿ.ನಮ್ಮ ಸಮಸ್ಯೆ ಏನೆಂದರೆ ನಾವು 'ಓಂ ನಮಃ ಶಿವಾಯ' ಎಂದು ಜಪಿಸುವುದಿಲ್ಲ. ನಮ್ಮ ಸಮಸ್ಯೆ ಏನೆಂದರೆ, ನಾವು ಏನನ್ನು ಮಾಡಬೇಕೆಂದು ಅರ್ಥಮಾಡಿಕೊಳ್ಳದೆ ಏನನ್ನಾದರೂ ಜಪಿಸುವುದು. ನಮ ಶಿವಾಯವು ಅಭಿವ್ಯಕ್ತಿಗಾಗಿ ಒಂದು ಮಂತ್ರವಲ್ಲ. ಅದು ನಿಮ್ಮ ಜೀವನಕ್ಕೆ ಸೇರಿಸಲು ವಿಷಯಗಳನ್ನು ಕೇಳುತ್ತಿಲ್ಲ.

ಇದು ನಿವಾರಣೆಗಾಗಿ ಒಂದು ಮಂತ್ರ.

- ಭ್ರಮೆಯನ್ನು ತೆಗೆದುಹಾಕಿ (ಮಾಯೆ).
- ಅಹಂಕಾರವನ್ನು ತೆಗೆದುಹಾಕಿ (ಅಹಂಕಾರ).
- ರೂಪಕ್ಕೆ ಅಂಟಿಕೊಂಡಿರುವ ಗುರುತನ್ನು ತೆಗೆದುಹಾಕಿ.
- ನೀವು ಮಾಡುವವರು ಎಂಬ ಸುಳ್ಳು ಕಲ್ಪನೆಯನ್ನು ತೆಗೆದುಹಾಕಿ.

ಪ್ರಾಚೀನ ತಮಿಳು ಶೈವ ಪಠ್ಯವಾದ ತಿರುಮಂತಿರಂನಲ್ಲಿ ಹೀಗೆ ಹೇಳಲಾಗಿದೆ: "ನ ಮ ಸಿ ವಾ ಯ, ಪ್ರತಿಯೊಂದು ಅಕ್ಷರವು ಭ್ರಮೆಯ ಒಂದು ಭಾಗವನ್ನು ಕತ್ತರಿಸುತ್ತದೆ. ದೇವರೊಂದಿಗೆ ಮಾತನಾಡಲು ಅಲ್ಲ, ಆದರೆ ನೀವು ಯಾರೆಂದು ಭಾವಿಸಿದ್ದೀರಿ ಎಂಬುದನ್ನು ಮರೆಯಲು ಅದನ್ನು ಜಪಿಸಿ." ಮಂತ್ರವು ಒಂದು

ಚಿಕ್ಕಚಾಕು, ಹಾಡಲ್ಲ, ಇಂದಿನ ಜಗತ್ತಿಗೆ ಒಂದು ಮಂತ್ರ. ಆಧುನಿಕ ಜೀವನವು ಹೊರಗಿನಿಂದ ಸುಳ್ಳು ಗುರುತುಗಳನ್ನು ನಿರ್ಮಿಸುತ್ತದೆ.

ಇಂದಿನ ಅತಿ–ಸಂಪರ್ಕಿತ, ಅತಿ–ಗುರುತಿಸಲ್ಪಟ್ಟ ಜೀವನದಲ್ಲಿ, ಎಲ್ಲವೂ ಕ್ಯುರೇಟ್ ಮಾಡಲ್ಪಟ್ಟಿವೆ, ನಿಮ್ಮ ಆಹಾರ, ನಿಮ್ಮ ಮನಸ್ಥಿತಿ, ನಿಮ್ಮ ಆಧ್ಯಾತ್ಮಿಕತೆ, ಅಹಂಕಾರವನ್ನು ಕರಗಿಸುವ ಕಲ್ಪನೆಯು ಹಳೆಯದಾಗಿ ತೋರುತ್ತದೆ, ಬಹುಶಃ ಅನಗತ್ಯವೂ ಆಗಿರಬಹುದು. ಆದರೆ ಅದು ಅಲ್ಲ. ಅದು ತುರ್ತು. ಬಾಹ್ಯ ವ್ಯಾಖ್ಯಾನಗಳು, ಪಾತ್ರಗಳು, ಕೆಲಸ, ನಂಬಿಕೆ ವ್ಯವಸ್ಥೆಗಳು, ಬುಡಕಟ್ಟುಗಳ ಆಧಾರದ ಮೇಲೆ ನಾವು ಹೆಚ್ಚು ಗುರುತುಗಳನ್ನು ನಿರ್ಮಿಸುತ್ತೇವೆ, ಅವುಗಳಾಚೆ ಇರುವ ನಿಶ್ಚಲತೆಯನ್ನು ನಾವು ಹೆಚ್ಚು ಮರೆತುಬಿಡುತ್ತೇವೆ.

ನಮ ಶಿವಾಯ ನಮ್ಮನ್ನು ಅಲ್ಲಿಗೆ ಕರೆದೊಯ್ಯುತ್ತದೆ. ಪ್ರತಿಯೊಂದು ಜಪವು ಪ್ರದರ್ಶನವಲ್ಲ. ಇದು ಶಾಂತವಾದ ಉರುಳಿಸುವಿಕೆ. ಪ್ರತಿ ಪುನರಾವರ್ತನೆ: ಸುಳ್ಳಿನಿಂದ ಹಿಂದೆ ಸರಿಯುವ ಮತ್ತು ಕಾಲಾತೀತವಾದ ಕಡೆಗೆ ಒಂದು ಹೆಜ್ಜೆ.

ನಮಃ ಶಿವಾಯದ ಶಕ್ತಿ: ವಿಭಿನ್ನ ವಂಶಾವಳಿಗಳು ವಿಭಿನ್ನ ಆವೃತ್ತಿಗಳನ್ನು ಒತ್ತಿಹೇಳುತ್ತವೆ; ಭಕ್ತಿ ಸಂಪ್ರದಾಯಗಳು ಓಂ ನಮಃ ಶಿವಾಯವನ್ನು ಬೆಂಬಲಿಸುತ್ತವೆ, ಆದರೆ ಸಿದ್ಧಾಂತ ಮತ್ತು ಯೋಗ ಮಾರ್ಗಗಳು ಅದರ ಧಾತುರೂಪದ ಮತ್ತು ಧ್ಯಾನ ಶುದ್ಧತೆಗಾಗಿ ನಮಃ ಶಿವಾಯವನ್ನು ಮಾತ್ರ ಬಳಸಬಹುದು. 'ಓಂ' ಪವಿತ್ರವಾಗಿದೆ. ಆದರೆ ನಾಮ ಶಿವಾಯ, ಅದರ ಶುದ್ಧ ರೂಪದಲ್ಲಿ, ಸುಡಲು ಏನೂ ಉಳಿದಿಲ್ಲದ ಬೆಂಕಿಯಂತಿದೆ. ಅದು ಆಭರಣಗಳಿಲ್ಲದ ಶಿವ. ಅಲಂಕಾರವಿಲ್ಲದ ಸತ್ಯ. ಪೂರ್ಣ ಅರಿವಿನೊಂದಿಗೆ ಅದನ್ನು ಜಪಿಸುವುದು ಎಂದರೆ ಅನಂತತೆಯ ಮುಂದೆ ಬೆತ್ತಲೆಯಾಗಿ ನಿಂತು, ನಿಮ್ಮ ಆಸೆಗಳನ್ನು ಅಲ್ಲ, ಆದರೆ ನಿಮ್ಮ ಆತ್ಮವನ್ನು ಅರ್ಪಿಸುವುದು. ಆದ್ದರಿಂದ ಹೌದು, ಮುಂದುವರಿಯಿರಿ. ಅದು ಹರಿಯುವಾಗ 'ಓಂ ನಮಃ ಶಿವಾಯ' ಎಂದು ಹೇಳಿ. ಆದರೆ, ನಮ ಶಿವಾಯವನ್ನು ಮಾತ್ರ ಪ್ರಯತ್ನಿಸಿ. ಒಂದು ಪದದಂತೆ ಅಲ್ಲ. ಬಿಡುಗಡೆಯಂತೆ. ಆಧ್ಯಾತ್ಮಿಕತೆಯನ್ನು ಅನುಭವಿಸಲು ಅದನ್ನು ಹೇಳಿ, ಆದರೆ ಜಗತ್ತು ನಿಮಗೆ ಹೇಳಿದ ಎಲ್ಲದರ ಕೆಳಗೆ ನೀವು ಯಾರೆಂದು ನೆನಪಿಡಿ.

ಏಕೆಂದರೆ ಕೊನೆಯಲ್ಲಿ, ಎಲ್ಲಾ ಶಬ್ದಗಳು ಕೊನೆಗೊಂಡಾಗ, ಶಿವ ಮಾತ್ರ ಉಳಿಯುತ್ತಾನೆ.

---

# ಅವನ ಇಚ್ಛೆ Vs ನನ್ನಿಚ್ಛೆ

ಇಲ್ಲಿಗೆ ಬರುವುದು ನಮ್ಮಿಚ್ಛೆಯಿಂದಲ್ಲ!
ಹೋಗುವುದೂ ನಮ್ಮಿಚ್ಛೆಯಿಂದಲ್ಲ!
ಬಂದು ಹೋಗುವ ನಡುವೆ ನಮ್ಮಿಚ್ಛೆಯಂತೆಲ್ಲಾ!
ನಕ್ಕುನಲಿದು ಕುಣಿದೆವು ಮೊದಲ 10 ವರುಷ ।
ಓದಿನಲಿ ನಿರತರಾದೆವು ಮತ್ತೆ 10 ವರುಷ ।
ಉದ್ಯೋಗ ಸಂಸಾರ ಮದುವೆಯಲ್ಲಿ ಕಳೆಯಿತು (30) ಮತ್ತೆ 10 ವರುಷ
ಮಕ್ಕಳ ವಿದ್ಯಾಭ್ಯಾಸ, ಸ್ವಂತ ಮನೆ ಕಾರು ಇತ್ಯಾದಿ 40 ವರುಷ
ಜೊತೆಗೆ ಶುರು ಎಲ್ಲದರ EMI ಪ್ರತಿ ವರುಷ ।
ನಂತ್ರ ಎಂಟ್ರಿ ಶುಗರ್, ಪ್ರೆಶರ್ ಇತ್ಯಾದಿ, ಸನಿಹದಲೆ ಇಹುದು 50ನೇ ವರುಷ ।
ನಿವೃತ್ತಿ ಹೊಂದಿದವನಿಗೆ ಅದೇನೋ ಸಡಗರ, ಸಂಭ್ರಮ ಹರುಷವೋ ಹರುಷ 60 ವರುಷ
ನಿವೃತ್ತಿ ಹೊಂದಿ ಬಂದ ಖುಷಿ ಆತಗೆ,
ಲಕ್ವ ಹೊಡೆದಂತಾಯ್ತು, ಹೊರಟಾಗ ಪತ್ನಿ ಟೂರಿಗೆ
ತಗ್ಗದೇ ಬಗ್ಗದೇ ಬೆಳೆಸಿ ನಿಂತಾ ಶರೀರ ।
ತಗ್ಗುವುದೇ ಬಗ್ಗುವುದೇ ಈಗ ಆ ಸ್ಥೂಲ ಶರೀರ ।
ಹೊರಟು ನಿಂತಾ ಸತಿಗೆ ಬೈ ಹೇಳಿ ನಡೆದಾ ಅಡುಗೆ ಮನೆಗೆ ।
ತಲೆ ಬುಡಾ ತಿಳಿಯದೆ ಮಾಡಿದಾ ಫೋನು ಮಾವನಾ ಮನೆಗೆ ।
ನಿಮಿಷದಲಿ ಬಂತು ತಿಂಡಿ, ಕಾಫಿಯಾ ಜೊತೆಗೆ ।
ತಿಂದು ಕುಡಿದು ಒರಗಿದಾ ಹಾಗೇ ಸೋಫಾದ ದಿಂಬಿಗೆ

**– ಶ್ರೀಮತಿ ರಾಜೇಶ್ವರಿ ಗೋಪಾಲಕೃಷ್ಣ**

# ಚಾಣಕ್ಯ

ಕೌಟಿಲ್ಯ ಎಂದೇ ಪ್ರಸಿದ್ಧನಾದ ಚಾಣಕ್ಯ (ಸು. ಕ್ರಿ. ಪೂ. .350–283) ಪ್ರಾಚೀನ ಭಾರತದ ಅದ್ವಿತೀಯ ಅರ್ಥಶಸ್ತ್ರಜ್ಞ ಮೌರ್ಯ ಸಾಮ್ರಾಜ್ಯ ಸ್ಥಾಪನೆಯಲ್ಲಿ ಚಾಣಕ್ಯನ ಪಾತ್ರ ಮಹತ್ವದ್ದು. "ವಿಷ್ಣುಗುಪ್ತ" ಎಂಬುದು ಚಾಣಕ್ಯನ ನಿಜವಾದ ಹೆಸರು. ಚಣಕನ ಮಗನಾದ್ದರಿಂದ ಚಾಣಕ್ಯನೆಂದು ಹೆಸರು ಬಂದಿತೆಂದು ಹೇಳಲಾಗುತ್ತದೆ. ವಿಷ್ಣುಗುಪ್ತ ತಕ್ಷಶಿಲೆಯ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ಪ್ರಾಧ್ಯಾಪಕನಾಗಿದ್ದನು. ತಕ್ಷಶಿಲೆ ಗಾಂಧಾರದಲ್ಲಿತ್ತು. ಗಾಂಧಾರದ ರಾಜ ಅಂಬಿಯವನ ಚಕ್ರವರ್ತಿಯಾದ ಅಲೆಕ್ಸಾಂಡರನ ಜೊತೆ ಒಪ್ಪಂದ ಮಾಡಿಕೊಂಡು ಇಡೀ ಭಾರತವನ್ನು ಯವನರ ಕೈಗೊಪ್ಪಿಸಲು ಹೊಂಚು ಹಾಕುತ್ತಾನೆ. ಆಗ ತನ್ನ ವಿದ್ಯಾರ್ಥಿಗಳ ಬೆಂಬಲದಿಂದ ಅಚಾರ್ಯ ವಿಷ್ಣುಗುಪ್ತನು ಬಂಡೇಳುತ್ತಾನೆ. ಈತನ ಶಿಷ್ಯನೆ ಚಂದ್ರಗುಪ್ತ ಮೌರ್ಯ.

ಅಸಾಧಾರಣ ಪ್ರತಿಭಾವಂತ. ಹಿಡಿದ ಕೆಲಸವನ್ನು ಪಟ್ಟು ಹಿಡಿದು, ಸಾಧಿಸುವ ಸ್ವಭಾವದವನು. ಸಕಲ ಶಾಸ್ತ್ರ ಪಾರಂಗತ, ಅರ್ಥಶಾಸ್ತ್ರ ಪ್ರವೀಣ. ರಾಜನೀತಿ ವಿಶಾರದ. ಸಾಮ, ದಾನ, ಭೇದ, ದಂಡ ಎಂಬ ಚತರೋಪಾಯ ಚತುರದ್ಯೆಯಲ್ಲಿ ತುಂಬಾ ಅನುಭವಿ, ಸೂಕ್ಷ್ಮಮತಿ. ಆತನ ಮನಸ್ಸಿನ ಅಭಿಪ್ರಾಯವನ್ನು ಹೀಗೆಂದು ತಿಳಿಯಲು ಯಾರಿಗೂ ಸಾಧ್ಯವಿಲ್ಲ. ಬಹಳ ರಹಸ್ಯವಾಗಿ ಕೆಲಸ ಮಾಡುವವನು. ಬಹುದೂರದ ಅಲೋಚನೆ, ಯಾವ ಕೆಲಸದಲ್ಲಿಯೇ ಆಗಲಿ ಆತ ಇಟ್ಟ ಗುರಿ, ಮಾಡಿದ ಅಂದಾಜು ಎಂದೂ ತಪ್ಪುತ್ತಿರಲಿಲ್ಲ. ಮಹಾತ್ಯಾಗಿ, ಮಹಾ ತಪಸ್ವಿ. ಹೊರನೋಟಕ್ಕೆ ತುಂಬ ಕಠಿಣ ಸ್ವಭಾವದವನು. ಅಪಾರ ಲೋಕಾನುಭವವಿದ್ದವನು. ಶತ್ರುಗಳನ್ನು ಸಂಹಾರ ಮಾಡುವುದರಲ್ಲಿ ಬಗೆಬಗೆಯ ತಂತ್ರಗಳನ್ನು ಸಮಯವರಿತು ಎಚ್ಚರಿಕೆಯಿಂದ ಮಾಡುವಾತ. ಆತನಿಗೆ ತಿಳಿಯದ ಶಾಸ್ತ್ರವಿಲ್ಲ. ಗೊತ್ತಿಲ್ಲದ ವಿಚಾರವಿಲ್ಲ. ಅದೊಂದು ಪ್ರತಿಭಾಪುಂಜ. "ಚಾಣಕ್ಯ ತಂತ್ರ" ಎಂಬ ಮಾತು ಈಗಲೂ ಗಾದೆಯಾಗಿದೆ. ನಂದವಂಶವನ್ನು ಸರ್ವನಾಶಮಾಡಿ, ಚಂದ್ರಗುಪ್ತನಿಗೆ ರಾಜ್ಯವನ್ನು ಕೊಡಿಸಿ, ಮೌರ್ಯ ಸಾಮ್ರಾಜ್ಯ ಸ್ಥಾಪಕನಾಗಿ ಮೆರೆದ ಪುಣ್ಯ ಪುರುಷ ಚಾಣಕ್ಯ. ಚಾಣಕ್ಯನಿಗೆ ಕೌಟಿಲ್ಯ ಎಂದು ಇನ್ನೊಂದು ಹೆಸರು. ಈತನ ಪ್ರತಿಭೆಯನ್ನು ತೋರಿಸುವ ಒಂದು ಪುಸ್ತಕ ಇಂದೂ ಉಳಿದಿದೆ. "ಅರ್ಥಶಾಸ್ತ್ರ" ಎಂದು ಅದರ ಹೆಸರು. ಅದು ಇಂಗ್ಲೀಷ್, ಫ್ರೆಂಚ್, ಜರ್ಮನ್– ಹೀಗೆ ಹಲವು ಭಾಷೆಗಳಿಗೆ ಅನುವಾದವಾಗಿದೆ. ದುರದೃಷ್ಟವೆಂದರೆ ಈತನ ವಿಷಯ ಖಚಿತವಾಗಿ ತಿಳಿದಿರುವುದು ಬಹು ಸ್ವಲ್ಪ. ಬೇರೆ ಬೇರೆ ಪುಸ್ತಕಗಳಲ್ಲಿ ದೊರೆಯುವ ಅಷ್ಟಿಷ್ಟು ಸಾಮಗ್ರಿಗಳನ್ನೆಲ್ಲ ಸೇರಿಸಿ ನಾವು, "ಪ್ರಾಯಶ: ಇದು ಇವನ ಜೀವನ ಚರಿತ್ರೆ" ಎಂದು ಹೇಳಬಹುದು.

ಚಾಣಕ್ಯನ ವಿದ್ಯಾಭ್ಯಾಸ ತಕ್ಷಶಿಲೆ ಎಂಬ ಊರಿನ ಪ್ರಸಿದ್ಧ ಶಾಲೆಯಲ್ಲಿ ಆಯಿತು. ತಕ್ಷಶಿಲೆಯ ಅಧ್ಯಾಪಕರು ಜಗತ್ಪ್ರಸಿದ್ಧ ವಿದ್ವಾಂಸರು. ಭಾರತದ ಎಲ್ಲಾ ಭಾಗಗಳಿಂದ ವಿದ್ಯಾಭ್ಯಾಸಕ್ಕಾಗಿ ಅಲ್ಲಿಗೆ ವಿದ್ಯಾರ್ಥಿಗಳು ಬರುತ್ತಿದ್ದರು. ರಾಜರು ಸಹ ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಅಲ್ಲಿಗೆ ಕಳುಹಿಸುತ್ತಿದ್ದರು. ಇಲ್ಲಿ ಒಬ್ಬ ಉಪಾಧ್ಯಾಯನ ಬಳಿ ಒಂದು ನೂರು ಒಂದು ಮಂದಿ ವಿದ್ಯಾರ್ಥಿಗಳು ಇದ್ದರಂತೆ. ಅಷ್ಟು ಮಂದಿಯೂ ರಾಜಕುಮಾರರಂತೆ! ಸಾಮಾನ್ಯವಾಗಿ ಹದಿನಾರನೆಯ ವರ್ಷಕ್ಕೆ ವಿದ್ಯಾರ್ಥಿ ಈ ವಿಶ್ವವಿದ್ಯಾನಿಲಯಕ್ಕೆ ಸೇರುತ್ತಿದ್ದ. ವೇದಗಳನ್ನೂ ಧನುರ್ವಿದ್ಯೆ, ಬೇಟೆ, ಆನೆಗಳನ್ನು ನೋಡಿಕೊಳ್ಳುವುದು ಹೇಗೆ ಎಂಬುವುದನ್ನೂ ಹದಿನೆಂಟು ಕಲೆಗಳನ್ನೂ ಕಲಿಸುತ್ತಿದ್ದರು. ನ್ಯಾಯಶಾಸ್ತ್ರ, ವೈದ್ಯಶಾಸ್ತ್ರ, ಸಮರಶಾಸ್ತ್ರ, ಇವುಗಳಿಗಾಗಿ ಇಲ್ಲಿದ್ದ ವಿದ್ಯಾ ಸಂಸ್ಥೆಗಳು ಭಾರತದಲ್ಲಿ ಮಾತ್ರವಲ್ಲ, ಆಚೆಯೂ ಸಹ ಪ್ರಖ್ಯಾತವಾಗಿದ್ದವು. ಇಂತಹ ಕೇಂದ್ರದಲ್ಲಿ ವಿದ್ಯಾಭ್ಯಾಸವಾಯಿತು.

ಅರ್ಥಶಾಸ್ತ್ರ: ಪುಸ್ತಕ ಇಂದು ಜಗತ್ಪ್ರಸಿದ್ಧ. ಯೂರೋಪಿನ ರಾಜ್ಯಶಾಸ್ತ್ರ ನಿಪುಣರು, ಸಮಾಜಶಾಸ್ತ್ರ ನಿಪುಣರು, ಅರ್ಥಶಾಸ್ತ್ರ ನಿಪುಣರು ಇದನ್ನು ಕುತೂಹಲದಿಂದ ಅಧ್ಯಯನ

ಮಾಡುತ್ತಾರೆ.ರಾಜಕುಮಾರನನ್ನು ಹೇಗೆ ಬೆಳೆಸಬೇಕು, ಅವರ ವಿದ್ಯಾಭ್ಯಾಸ ಹೇಗಾಗಬೇಕು ಇವುಗಳ ವಿವರಣೆಯಿಂದ "ಅರ್ಥಶಾಸ್ತ್ರ" ಪ್ರಾರಂಭವಾಗುತ್ತದೆ. ಅನಂತರ ರಾಯಭಾರಿಗಳ ಆಯ್ಕೆ, ಗೂಢಚಾರರನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಇವುಗಳ ವಿವರಣೆ. ರಾಜನಿಗೆ ಅಪಾಯ ಒದಗದ ಹಾಗೆ ರಕ್ಷಣೆ ಕೊಡಬೇಕು ಎಂದು ಚಾಣಕ್ಯ ವಿವರಿಸುತ್ತಾನೆ. ಕಾನೂನು, ಪೋಲಿಸರ ಕೆಲಸ–ಕಾರ್ಯ, ಶ್ರೀಮಂತರನ್ನು ಹೇಗೆ ಅಧೀನದಲ್ಲಿ ಇಟ್ಟುಕೊಳ್ಳಬೇಕು, ಅವರು ದಾನ ಮಾಡುವಂತೆ ಹೇಗೆ ಪ್ರಚೋದಿಸಬೇಕು, ನೇರವಾಗಿ ಯುದ್ಧವನ್ನು ತಪ್ಪಿಸುವ ವಿಧಾನಗಳು, ಜ್ಯೋತಿಷ್ಯ, ಪುರೋಹಿತ ಮತ್ತಿತರರ ಕರ್ತವ್ಯವೇನು, ಶತ್ರುರಾಜರನ್ನು ಉಪಾಯದಿಂದ ಕೊಲ್ಲುವುದು ಹೇಗೆ, ಮನುಷ್ಯರು ಮತ್ತು ಪ್ರಾಣಿಗಳು ನಿದ್ರೆ ಮಾಡುವಂತೆ ಮಾಡುವ ಕ್ರಮ– ಹೀಗೆ "ಅರ್ಥಶಾಸ್ತ್ರ"ದಲ್ಲಿ ಚಾಣಕ್ಯ ಚರ್ಚೆ ಮಾಡುವ ವಿಷಯಗಳು ನೂರಾರು. ಎಷ್ಟು ವಿಷಯಗಳನ್ನು ಪರಿಶೀಲಿಸುತ್ತಾನೆ ಎನ್ನುವುದೇ ಬೆರಗನ್ನುಂಟು ಮಾಡುತ್ತದೆ. ಅವನ ಕುಶಾಗ್ರ ಬುದ್ಧಿ ವಿಸ್ಮಯಗೊಳಿಸುವಂತಹದು. ಚಾಣಕ್ಯನ ಪ್ರಕಾರ ರಾಜನ ಮುಖ್ಯ ಕರ್ತವ್ಯ ಧರ್ಮರಕ್ಷಣೆ. ಧರ್ಮವನ್ನು ಎತ್ತಿಹಿಡಿದ ರಾಜನಿಗೆ ಇಹದಲ್ಲೂ ಪರದಲ್ಲೂ ಸುಖ. ಮತ್ತೊಂದು ಮಾತನ್ನು ಚಾಣಕ್ಯ ಹೇಳುತ್ತಾನೆ– ಬಹುಸ್ವಾರಸ್ಯವಾದುದು, ಮುಖ್ಯವಾದುದು. ರಾಜ ತನ್ನ ಅಧಿಕಾರವನ್ನು ಅನ್ಯಾಯವಾಗಿ ಉಪಯೋಗಿಸಿದರೆ ಅವನಿಗೂ ಶಿಕ್ಷೆ ಆಗಬೇಕು."ರಾಜನಿಗೆ ಸದಾ ಪ್ರಜೆಗಳ ಹಿತಕ್ಕಾಗಿ ದುಡಿಯುವುದೇ ವ್ರತ; ರಾಜ್ಯದ ಆಡಳಿತದ ಕೆಲಸವೇ ಶ್ರೇಷ್ಠ ಧರ್ಮಾಚರಣೆ: ಎಲ್ಲರನ್ನೂ ಸಮಾನರಾಗಿ ಕಾಣುವುದೇ ಬಹು ದೊಡ್ಡ ದಾನ." "ಜನರ ಸುಖವೇ ರಾಜನ ಸುಖ, ಅವರ ಕಲ್ಯಾಣವೇ ಅವನ ಕಲ್ಯಾಣ, ಅವನು ತನ್ನ ಸುಖದ ಕಡೆಗೆ ಲಕ್ಷ್ಯ ಕೊಡಬಾರದು. ತನ್ನ ಪ್ರಜೆಗಳ ಸಂತೋಷದಲ್ಲಿ ಸಂತೋಷವನ್ನು ಕಂಡುಕೊಳ್ಳಬೇಕು". ಎರಡು ಸಾವಿರದ ಮುನ್ನೂರು ವರ್ಷಗಳ ಹಿಂದೆ ಈ ಮಾತುಗಳನ್ನು ಬರೆದ ಚಾಣಕ್ಯ ರಾಜ್ಯಶಾಸ್ತ್ರ ನಿಪುಣ, ವಿವೇಕಿ; ತಂತ್ರಗಾರಿಕೆ, ಬುದ್ಧಿವಂತಿಕೆ, ಛಲ ಸಾಹಸಗಳಿಗೆ ಮತ್ತೊಂದು ಹೆಸರು ಚಾಣಕ್ಯ.

ಚಾಣಕ್ಯನ ಅರ್ಥಶಾಸ್ತ್ರವು ಪ್ರಾಚೀನ ಭಾರತೀಯ ಗ್ರಂಥವಾಗಿದ್ದು, ರಾಜ್ಯಶಾಸ್ತ್ರ, ಆರ್ಥಿಕ ನೀತಿ ಮತ್ತು ಸೇನಾ ಕಾರ್ಯತಂತ್ರಗಳ ಬಗ್ಗೆ ವಿವರಿಸುತ್ತದೆ. ಇದನ್ನು ಚಾಣಕ್ಯ ಅಥವಾ ಕೌಟಿಲ್ಯ ಎಂದು ಕರೆಯಲ್ಪಡುವ ವಿಷ್ಣುಗುಪ್ತನು ಬರೆದಿದ್ದಾನೆ. ಮೌರ್ಯ ಸಾಮ್ರಾಜ್ಯದ ಸ್ಥಾಪಕ ಚಂದ್ರಗುಪ್ತ ಮೌರ್ಯನ ಗುರು ಮತ್ತು ಮಾರ್ಗದರ್ಶಕನಾಗಿದ್ದನು ಚಾಣಕ್ಯ.

ಅರ್ಥಶಾಸ್ತ್ರದಲ್ಲಿ, ರಾಜನ ಕರ್ತವ್ಯಗಳು, ಆಡಳಿತ, ಆರ್ಥಿಕ ನೀತಿ, ಸೇನಾ ತಂತ್ರಗಳು, ನ್ಯಾಯಾಂಗ ವ್ಯವಸ್ಥೆ, ಮತ್ತು ಸಮಾಜದ ವಿವಿಧ ಅಂಶಗಳ ಬಗ್ಗೆ ವಿವರಣೆಗಳಿವೆ. ಇದು ಕೃಷಿ, ಗಣಿಗಾರಿಕೆ, ಪಶುಸಂಗೋಪನೆ, ಔಷಧ, ಅರಣ್ಯ ಮತ್ತು ವನ್ಯಜೀವಿಗಳ ಬಗ್ಗೆಯೂ ಚರ್ಚಿಸುತ್ತದೆ.

ಚಾಣಕ್ಯನ ಪ್ರಕಾರ, ರಾಜನು ಧರ್ಮವನ್ನು ರಕ್ಷಿಸಬೇಕು ಮತ್ತು ಪ್ರಜೆಗಳ ಹಿತಕ್ಕಾಗಿ ದುಡಿಯಬೇಕು. ಅವನ ಪ್ರಕಾರ, ಪ್ರಜೆಗಳ ಸುಖವೇ ರಾಜನ ಸುಖ, ಮತ್ತು ಅವರ ಕಲ್ಯಾಣವೇ ಅವನ ಕಲ್ಯಾಣ.

ಅರ್ಥಶಾಸ್ತ್ರವು ಕೇವಲ ಒಂದು ರಾಜಕೀಯ ಗ್ರಂಥವಲ್ಲ, ಆದರೆ ಅದು ಆರ್ಥಿಕ, ಸಾಮಾಜಿಕ, ಮತ್ತು ಸಾಂಸ್ಕೃತಿಕ ವಿಷಯಗಳ ಬಗ್ಗೆಯೂ ಮಾಹಿತಿಯನ್ನು ಒದಗಿಸುತ್ತದೆ. ಇದು ಪ್ರಾಚೀನ ಭಾರತದ ಆಡಳಿತ ವ್ಯವಸ್ಥೆ ಮತ್ತು ಸಮಾಜದ ಬಗ್ಗೆ ಅಧ್ಯಯನ ಮಾಡಲು ಒಂದು ಪ್ರಮುಖ ಆಧಾರವಾಗಿದೆ.

ಚಾಣಕ್ಯನ ಅರ್ಥಶಾಸ್ತ್ರವು ಇಂದಿಗೂ ಪ್ರಸ್ತುತವಾಗಿದೆ, ಮತ್ತು ಅನೇಕ ವಿದ್ವಾಂಸರು ಮತ್ತು ರಾಜಕೀಯ ನಾಯಕರು ಇದನ್ನು ಅಧ್ಯಯನ ಮಾಡುತ್ತಾರೆ.

# Ancient History of Bharat

✍ Nikhil Chandwani

We certainly do not know much about Bharat before alexander invaded this land. There are not much written history of the Rulers and its people, as Indians did not trust writing. They relied more on transmitting through Oral Memories.

The ancient times resided their strength and worshipped the realms of nature. The pre-historic era can be seen with the era where the Solar King Manu was in reign. In his era, the line of ancestry was a queue of his ten sons. Ikshvaku, being the eldest son was handed over the entire Earth to rule. In his dynasty, Agnidhara was a prominent ruler. With the charge of the kingdom of Jambudweep or the island of Eurasia, Agnidhara stood in all his might along with his brothers as the ruler of the other six continents. The throne of Agnidhra saw the birth of nine princes; hence, the land of Jambudweepa was divided into nine realms. One of these realms named Bharat which was to be India, was handed to Nabhi who named the country Ajnabha Varsha after himself. With his son Rishabhdeva in succession, as the kingdom was left; Risabhdeva's heir Bharat was finally King. Therefore, eventually the country came to be known as Bharat Varsha.



Then began the first Vedic Era. This is the first step into the era where the birth of Rama takes place. Rama emerged as the greatest ruler of Bharat Mata. A truly beautiful period with unity and peace. The era called the Tretayuga sees a development of the Solar Dynasty or the Suryavansha. Bharat has a further breakdown into several kingdoms. This can be considered to be one of the longest reigns under Rama's reign that lasted for over thirty thousand years in this Vedic era. There is a widespread notion of peace and prosperity both across the nation and the world in general. A few generations are passed and the ruling period for the Yadava's dynasty starts coming into vision.

The second Vedic era began with Yadava Dynasty. This is the era that marks the fragility of the Lunar reign of Yayati. According to our history, he asks Yadu for boon of youth which is refused. Puru, his second son grants him this boon and hence his clan comes directly in line to the throne. Yadu is cursed and his clan would never rule over the kingdom again. Until the birth of Krishna to the clan of Yadu, the Yadavas are ridiculed. Krishna unites the kingdom and takes control of the magnificent city of Dwarka. He reserves a separate sanctity for the rule of Yadavas but they are infatuated to the might of power. Consequently,

there is a great war between Pandavas and Kauravas. With Yadavas on the Pandavas side, this war marks the ending of the Lunar Dynasty.

The post Vedic era is often referred to as the era of Kaliyuga. In this era, Kali enters the Earth and establishes his rule. There is widespread misery, lust, anger, intoxication and negativity prevails throughout this reign. This is popularly known as the era of Adharma. Before Maurya Era began, Magadha was ruled by Pradyota for an elongated 138 years. The last ruler, Nandivardhana is defeated by the Haryanka dynasty. They are then overthrown by the Amatya Shishunaga. Finally, Mahapadmananda becomes the ruler in 345 BCE. His heir, Dhanananda is overthrown by Chandragupta Maurya under the tutelage Chanakya.

The Maurya Empire and the evolution of Buddism. Chandragupta Maurya's reign is succeeded by his grandson is Ashoka – The Great, who revolutionizes Buddhism and spends a lot of time in his reign in preaching about peace and humanity. After several invasions form various outsiders, Chandragupta II retains the honor of the throne.

The post Mauryan Era sees a defeat of the Mauryan Dynasty with a succession of the Shunga dynasty. The last Shunga King, Devabhuti Shunga is eventually defeated by Vasudeva Kanva. After years of reignibg, the Shatavahana Dynasty finally takes over.

The era before Gupta Era. This era witnesses the great rule of Kanishka, the most important king of Kushans. On the other hand, the Early Cholas and the Cheras establish control over the South region. The Sangam literature tells the tales of this magnificent time.

The Gupta era marks the start of a Golden Age. Established by Shri Gupta, the Gupta Dynasty sees the growth of art, religion, culture, trade, economy, temples and prosperity of India. The culture of cave inscriptions and the great Nalanda University are creations of this reign. Eventually under Buddhagupta, the Kingdom fell apart and the end of the golden period was observed.

The post Gupta Era started the era of literature and growth. Banabhatta was the poet of Harshavardhana's court and Harshavardhana was a prolific Sanskrit Poet. At this time, Chalukya, Pallava and Chola were in a state of contant war in the south.

The Chalukyas were defeated by the Cholas in this period where Tamil literature prospered. This is the history of Bharat before the invasion of Muhammad bin Qasim. ●



# OBITUARY

The Members of Mysore Association are deeply saddened by the Demise of **Mr. Ananda / Ananthakrishnan**, who was a former member of the Managing Committee. He was an active member. He shifted to Bengaluru to care of his Mother and Father.

We pray the Lord to give his Mother and entire family enough strength to bear this irreparable loss.

# ಮೈಸೂರು ಅಸೋಸಿಯೇಷನ್, ಮುಂಬಯಿ

# The Mysore Association, Bombay

393, Bhau Daji Road, Matunga, Mumbai - 400 019. Tel: ( 022 ) 2403 7065
Website: www.mysoreassociation.in E-mail: mysoreassociation.mumbai@gmail.com


**ಮೈಸೂರು ಅಸೋಸಿಯೇಷನ್ ನೂರರ ನಲಿವು 1926-2026**

ಆಗಸ್ಟ್ 06, 2025

## ನೇಸರು ಜಾಗತಿಕ ಸಣ್ಣ ಕಥೆ ಸ್ಪರ್ಧೆ – 2025

## ಶತಮಾನೋತ್ಸವ ಪ್ರಶಸ್ತಿ

ಮೈಸೂರು ಅಸೋಸಿಯೇಷನ್, ಮುಂಬೈ ಒಂದು ಪ್ರತಿಷ್ಠಿತ ಕನ್ನಡ ಸಂಸ್ಥೆಯಾಗಿದ್ದು, ತನ್ನ ಶತಕವನ್ನು ಪೂರೈಸುವತ್ತ ಮುಂದುವರಿಯುತ್ತಿದೆ. ಈ ಮೊದಲೂ ಕೂಡಾ ಕನ್ನಡ ಕವನ, ಕಥೆ ಹಾಗೂ ಏಕಾಂಕ ನಾಟಕ ಸ್ಪರ್ಧೆಯನ್ನು ಆಯೋಜಿಸುತ್ತಲೇ ಬಂದಿದೆ. ಇದರ ಮುಂದುವರಿದ ಭಾಗವಾಗಿ "ಶತಮಾನೋತ್ಸವ ವಿಶೇಷ"ಜಾಗತಿಕ ಸಣ್ಣ ಕಥೆ ಸ್ಪರ್ಧೆಯ ಘೋಷಣೆಯನ್ನು ಈ ಮೂಲಕ ಮಾಡಲಾಗುತ್ತಿದೆ.
ಈ ಸ್ಪರ್ಧೆಯಲ್ಲಿ ವಿಶ್ವದಾದ್ಯಂತ ಆಸಕ್ತರೆಲ್ಲರೂ ಭಾಗವಹಿಸಬಹುದು. ಇಲ್ಲಿ ಯಾವುದೇ ಪ್ರವೇಶ ಶುಲ್ಕವಿರುವುದಿಲ್ಲ. ಆಸಕ್ತರು ಯಾವುದೇ ವಿಷಯದ ಕುರಿತು ಕಥೆಯನ್ನು ರಚಿಸಬಹುದು.

### ನೇಸರು ಜಾಗತಿಕ ಸಣ್ಣ ಕಥೆ ಸ್ಪರ್ಧೆ –2025

| | | | |
|---|---|---|---|
| ಪ್ರಥಮ ಬಹುಮಾನ | – | ರೂ. | 20,000 |
| ದ್ವಿತೀಯ ಬಹುಮಾನ | – | ರೂ. | 15,000 |
| ತೃತೀಯ ಬಹುಮಾನ | – | ರೂ. | 10,000 |
| ಮೆಚ್ಚುಗೆಯ ಬಹುಮಾನ (ಇಬ್ಬರಿಗೆ): ತಲಾ | – | ರೂ. | 5,000 |

### ಸ್ಪರ್ಧೆಯ ನಿಯಮಾವಳಿಗಳು:

- ಕಥೆಗಳು ಕನ್ನಡದಲ್ಲಿದ್ದು, ಸ್ವರಚಿತವಾಗಿರಬೇಕು, ಅನುವಾದ ಅನುಕರಣೆ ಆಗಿರಕೂಡದು.
- ಸ್ಪರ್ಧೆಗೆ ಕಳುಹಿಸಿದ ಕಥೆಗಳು ಬೇರೆಲ್ಲೂ ಪ್ರಕಟವಾಗಿರಬಾರದು.
- ಒಬ್ಬರಿಗೆ ಒಂದೇ ಕಥೆ ಕಳುಹಿಸಲು ಅವಕಾಶ.
- ಸ್ಪರ್ಧೆಗೆ ಬಂದ ಕಥೆಯನ್ನು ಮರಳಿಸಲಾಗುವುದಿಲ್ಲ.
- ಕಥೆಗಳು 1000 ಪದಗಳಿಗೆ ಮೀರದಂತಿರಬೇಕು.
- ಕಾಗದದ ಒಂದೇ ಮಗ್ಗುಲಲ್ಲಿ ಚಿತ್ತಿಲ್ಲದಂತೆ ಬರೆದಂತಹ ಅಥವಾ ಕಂಪ್ಯೂಟರ್ ಮುದ್ರಿತ ಬರಹವನ್ನು ಅಂಚೆ ಅಥವಾ ಕೆಳಗೆ ತಿಳಿಸಿದ ಇಮೇಲ್ ಗೆ ಕಳುಹಿಸಬಹುದು.

  kate.nesaru@gmail.com
- ಬರೆದವರ ಹೆಸರು, ವಿಳಾಸ, ಜನ್ಮ ದಿನಾಂಕ, ಮೊಬೈಲ್ ಸಂಖ್ಯೆ ಹಾಗೂ ಇಮೇಲ್ ಪ್ರತ್ಯೇಕ ಪುಟದಲ್ಲಿ ಬರೆದಿರಬೇಕು.
- ತೀರ್ಪುಗಾರರ ತೀರ್ಮಾನವೇ ಅಂತಿಮ. ಇದರ ಬಗ್ಗೆ ಯಾವ ಚರ್ಚೆ ಅಥವಾ ಪತ್ರ ವ್ಯವಹಾರ ಇಲ್ಲ.
- ಕಥೆಗಳು ನಮ್ಮ ಕೈ ಸೇರುವ ಕೊನೆಯ ದಿನಾಂಕ: ಅಕ್ಟೋಬರ್ 31, 2025
- ಆಯ್ಕೆಯಾದ ಕಥೆಗಳನ್ನು ನಮ್ಮ ಮೈಸೂರು ಅಸೋಸಿಯೇಷನ್ನಿನ ಮುಖವಾಣಿ 'ನೇಸರು'ವಿನಲ್ಲಿ ಕಾಲಕಾಲಕ್ಕೆ ಪ್ರಕಟಿಸುವ ಹಕ್ಕು ಮೈಸೂರು ಅಸೋಸಿಯೇಷನ್ ಕಾದಿರಿಸಿದೆ.


Postal Address:
The Mysore Association, Bombay
393, Bhau Daji Road, Matunga (Central), Mumbai – 400019
Tel: 022- 24037065 (M) - 8369788157
(ಬೆಳಿಗ್ಗೆ 11.00 ರಿಂದ ಸಂಜೆ 7.00 ಘಂಟೆಯವರೆಗೆ)




# PUZZLES & TEASERS

## I. FUNNY RIDDLES

1. Every night I'm told what to do, and each morning I do what i'm told. But I still don't escape your scold. What am I?
2. What do the letter "t" and an island have in common?
3. Which word in the dictionary is spelled incorrectly?
4. What has many rings but no fingers?
5. What can you break without touching it?
6. I sometimes run, but I can't walk. What am I?
7. It has keys, but no locks. It has space, but no room. You can enter, but can't go inside. What is it?
8. Pronounced as one letter, And written with three, two letters there are, and two only in me. I'm double, I'm single, I'm black blue and gray, I'm read from both ends, and the same either way. What am I?
9. What kind of ship has two mates but no captain?
10. What has hands but cannot clap?

## II. REBUS PUZZLES

1. which number should replace the question mark in the picture below ?





2. What does below beer cap means?





## II. SOLVE PUZZLE

A




B

Is that a chemical element?




C




## PUZZLES & TEASERS ANSWERS

I. FUNNY RIDDLES:1). A potato, 2). On the corner, 3). A coat of paint, 4). The letter "o", 5). Silence 6). Light, 7). Footsteps, 8). Footsteps, 9). Money, 10). Short.

II. Rebus Puzzles: A: 1). Four-wheel drive, 2). Apple pie, 3). Up to you, 4). Robin Hood, 5). Design, 6). Engineer, 7). Vegetables, 8). Afternoon tea, 9). Camping overnight, 10). Time to go, 11). Long time no see, 12). Polite.
B: 1). Fishing hook, 2). Farm animal/Animal farm, 3). Touchdown, 4). Honeybee, 5). Cornerstone, 6). Love at first sight, 7). Freeze over, 8). Caveman/Mancave, 9). Catwalk, 10). Hiking in the woods (High king), 11). Sandbox, Lovebirds.

III. SOLVE PUZZLE: 1).BRUISED EGO, 2). META 4, 3). HASH BROWNS.

*Compiled by: Mr Ananth Banwasi*

# THE MYSORE ASSOCIATION, MUMBAI

## CENTENARY YEAR CELEBRATIONS 1926 - 2026

We are pleased to announce a Drawing / Painting competition
Date of Competition: August 10, 2025, Sunday Time: (See items 2A and 2B below)

Location: The Mysore Association premises at Matunga

The details of the competition are as below

1. The competition is open for individuals from Maharashtra and will conducted at The Mysore Association premises at Matunga.
2. The competition will be held in two broad sections:
   a. Drawing / Painting For Children, Competition Date will be anounced shortly.
   b. Landscape painting (Open category) (From 7 AM to 2 PM on August 10, 2025)
3. **Children's category will be in different groups as below**

a. Group A (Children in class 1 -2). Topics (any one)
   i. My favourite God
   ii. My favourite cartoon character
   iii. My class room

**b. Group B (Children in class 3-4). Topics (any one)**
   i. Me and my friends
   ii. My favourite animal
   iii. Flower Pot

**c. Group C (Children in class 5-6). Topics (any one)**
   i. Any story from Krishnavatara
   ii. My favourite tourist place in Maharashtra
   iii. My favourite character from Ramayana

**d. Group D (Children in class 7-8). Topics (any one)**
   i. Unity in creativity
   ii. My favourite Temple
   iii. My favourite sports character

**e. Group E (Children in class 9-10). Topics (any one)**
   i. Operation Sindoor
   ii. Indian Astronaut in International Space Station
   iii. My school in rainy season

4. Topics for Open category shall be drawn from a day-to-day life scene in Sion – Matunga area.
5. Prizes: a. For Group A to E, three prizes (I,II,III) in each group in the form of drawing kits

**b. For open category, cash prizes of Rs. 10,000 / 7000 / 5000 for the best three entries.**

c Three special cash prizes each of Rs. 3000 will be awarded to be best entries by female participants in open category (other than the prize winners).

d. Prizes will be distributed in the afternoon on the same day.

6. Drawing paper will be provided by the Organisers at the time of competition. All other drawing materials shall be brought by the participants.

7. Light refreshments will be provided after the competition.
8. The decision of the judges is final.
9. The drawings / paintings submitted as a part of the competition will become the property of The Mysore Association.
10. Please register yourself for the competition by filling up the Google form here: https://forms.gle/4U9qXEbvsJyV9wSx5
11. For clarifications, please contact:
    a. The Mysore Association 83697 88157 / 022 2403 7065
    b. Sri. Narayana Navilekar 92233 81466
    c. Sri. Jay Salian 93234 03080

## ಶ್ರೀ ಸ್ವರ್ಣ ಗೌರಿ ಹಾಗೂ ಶ್ರೀ ಮಹಾಗಣಪತಿ ಮಹೋತ್ಸವ

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ 1947 (2025) ರ ಶ್ರೀ ವಿಶ್ವಾವಸು ನಾಮ ಸಂವತ್ಸರದ ಭಾದ್ರಪದ ಶುದ್ಧ ತೃತೀಯ ಮಂಗಳವಾರ 26.08.2025 ರಂದು ಶ್ರೀ ಸ್ವರ್ಣ ಗೌರಿಯನ್ನು ಮತ್ತು ಚತುರ್ಥಿ ಬುಧವಾರ 27.08.2025 ರಂದು ಶ್ರೀ ಮಹಾಗಣಪತಿಯನ್ನೂ ಆವಾಹಿಸಿ, ಅಷ್ಟಮಿ ಭಾನುವಾರ 31.08.2025 ರವರೆಗೆ ಉತ್ಸವವನ್ನು ಅಸೋಸಿಯೇಶನ್ನಿನ ಆಶ್ರಯದಲ್ಲಿ ಎಂದಿನಂತೆ ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ.

ದಿನಾಂಕ 31.08.2025 ನೇ ಭಾನುವಾರ ಬೆಳಿಗ್ಗೆ 9.30 ರಿಂದ ಸಕಲ ಪೂಜಾದಿ ಸೇವೆಗಳನ್ನು ಸಲ್ಲಿಸಿ, ಮಹಾ ಮಂಗಳಾರತಿ ಮಾಡಿ ನಂತರ ಗೌರಿ ಗಣಪತಿಯನ್ನು ವಿಸರ್ಜಿಸಲಾಗುವುದು. ತಾವುಗಳೆಲ್ಲರೂ ಈ ಮಹೋತ್ಸವದಲ್ಲಿ ಭಾಗವಹಿಸಿ, ಉದಾರ ಸಹಾಯ ಮಾಡಿ ಭಗವತ್ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ. ಸೇವಾರ್ಥ ಕೊಡಲಿಚ್ಛಿಸುವವರು ತಮ್ಮ ಹೆಸರು, ಜನ್ಮ ನಕ್ಷತ್ರ, ಗೋತ್ರ, ಪೂಜೆ ನೆರವೇರಿಸಬೇಕಾದ ದಿನಾಂಕ ಬರೆದು ನಮ್ಮ ವಿಳಾಸಕ್ಕೆ ದಿನಾಂಕ 23.08.2025 ರೊಳಗೆ ತಲುಪಿಸಿರಿ ಅಥವಾ email ಮಾಡಿ.

**ಅಧ್ಯಕ್ಷರು ಹಾಗೂ ಸಮಿತಿ ಸದಸ್ಯರು**

**ವಿ.ಸೂ.:**

1. ಸೇವಾರ್ಥ ನಡೆಸಲಿಚ್ಛಿಸುವವರು 251/– ರೂ. ಗಳ ಅಥವಾ ಹೆಚ್ಚಿನ ಕಾಣಿಕೆಯನ್ನು (ನಗದು/ಚೆಕ್) ಅಂಚೆ ಮೂಲಕ ಕಳುಹಿಸಬಹುದು ಅಥವಾ ಸ್ವತಃ ಅಸೋಸಿಯೇಶನ್ನಿನ ಕಛೇರಿಗೆ ಬಂದು ನೀಡಬಹುದು.
2. ಗೌರಿ ಪೂಜೆಯಲ್ಲಿ ಭಾಗವಹಿಸಲು ಬಯಸುವ ಮಹಿಳೆಯರು ತಮ್ಮ ಹೆಸರನ್ನು ದಿನಾಂಕ 23.08.2025ರೊಳಗೆ ಕಾರ್ಯದರ್ಶಿಗಳಿಗೆ ತಿಳಿಸಬೇಕೆಂದು ಕೋರಿಕೆ.
3. ಪೂಜೆ ಕಾರ್ಯಕ್ರಮದ ಅಂಗವಾಗಿ ನಡೆಸುವ ಪ್ರತಿ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಡಲಿಚ್ಛಿಸುವ ಸದಸ್ಯರು ರೂ. 3000/–ವನ್ನು ದೇಣಿಗೆಯಾಗಿ ಕೊಡಬೇಕೆಂದು ವಿನಂತಿ.

## SHRI SWARNA GAURI AND SHRI MAHAGANAPATHI POOJA - 2025

In keeping with its glorious tradition, your Association is conducting Shri Swarna Gauri and Shri Mahaganapathi Pooja this year also, with all pomp and gaiety from 26th August 2025 to 31st August 2025. This event will be marked by the traditional pooja every morning and cultural programmes followed by traditional pooja in the evenings. The Visarjana will be on 31st August 2025. A detailed programme will be mailed to you in due course. Those desirous of giving "Sevartha" Rs. 251/- or more may please send their cheque to the Mysore Association office, stating the preferred date for pooja along with your Name, Gotra and Nakshatra.

Bank Details:
Name : THE MYSORE ASSOCIATION, BOMBAY
SB A/c No : 54000637287
IFSC code : SBIN0040243
Bank : STATE BANK OF INDIA
Branch : MATUNGA (EAST)

# ಮೈಸೂರು ಅಸೋಸಿಯೇಷನ್, ಮುಂಬಯಿ


# The Mysore Association, Bombay

393, Bhau Daji Road, Matunga, Mumbai - 400 019. Tel: ( 022 ) 2403 7065
Website: www.mysoreassociation.in E-mail: mysoreassociation.mumbai@gmail.com


## ಮೈಸೂರು ಅಸೋಸಿಯೇಷನ್ ನೂರರ ನಲಿವು 1926–2026



# SHREE SWARNA GOWRI & SHREE MAHAGANAPATHI POOJA MAHOTSAVA



***Shree Vishwavasu Naama Samvatsara Shalivaahana Shake 1947 (2025)***

| | | |
|---|---|---|
| **26/08/2025** | 10.00 a.m. | Shree Swarna Gowri Pratishtapa Pooja |
| Tuesday | 7.30 p.m. | Pooja & Mangalarthi |
| **27/08/2025** | 9.30 a.m. | Shree Mahaganapati Pratishtapana Pooja |
| Wednesday | | 7.30 p.m. Pooja & Mangalarthi |
| **28/08/2025** | 9.30 a.m. | Pooja & Mangalarathi |
| Thursday | 7.30 p.m. | Pooja & Mangalarthi |
| **29/08/2025** | 9.30 a.m. | Pooja & Mangalarthi |
| Friday | 6.00 p.m. | Arasina Kumkuma for Ladies |
| | 6.30 p.m. | Bhajans |
| | 7.30 p.m. | Pooja & Mangalarthi |
| **30/08/2025** | | |
| | 9.30 a.m. | Pooja & Mangalarthi |
| Saturday | | |
| | 7.30 p.m. | Pooja & Mangalarthi |
| **31/08/2025** | | |
| | 9.30 a.m. | Pooja & Managalartahi |
| Sunday | | |
| | 12.00 Noon | Mahamangalarathi Shree Swarngagowri & |
| | 7.30 p.m. | Shree Mahaganapathi Immersion Prasada |
| | | Viniyoga Pooja & Mangalarthi |

# Independence Day Celebration

**August 15, 2025 at 10.00 a.m**
**At Association's Premises.**

ಮೈಸೂರು ಅಸೋಸಿಯೇಷನ್, ಮುಂಬಯಿ

The Mysore Association, Bombay

393, Bhau Daji Road, Matunga, Mumbai - 400 019. Tel: ( 022 ) 2403 7065

Website: www.mysoreassociation.in E-mail: mysoreassociation.mumbai@gmail.com

ಮೈಸೂರು ಅಸೋಸಿಯೇಷನ್ ನೂರರ ನಲಿವು 1926-2026

# The Mysore Association's Centenary Celebration at Bangalore

*The Mysore Association is in its 100th year and is celebrating each month at Mumbai. However, as many of our members are in Bangalore, the Association has decided to have a daylong celebration on **05th October 2025** at **Bharatiya Vidya Bhavan, Bangalore from 10.30 a.m. to 6.30 p.m.***

*The daylong celebration will begin with recalling memories, honouring our Senior Members who have contributed to the growth of the Association, dance by Smt. Sudha Srinivas Rao and Team, following "Humour" by Shri Gundurao and Play by Shri. V. Ranganath Rao., and Music Concert by Smt. Manasi Prasad with Tea / Coffee, Lunch and Snacks.*

*This is an opportunity to mingle again with all your friends.*

*Please treat this as an invitation to you and your family and make it point to attend the daylong celebrations.*

*Looking forward to meet you All.*

***Smt. Kamala K.***
*President*

***Dr. Ganapati Shankarling***
*Hon. Secretary*

***And***

***ALL COMMITTEE MEMBERS***

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077